## ವಾರ್ಷಿಕ ಸಂಭ್ರಮ : ಚಿತ್ರ ಚಿತ್ತಾರ



'ದೀಪಂಜ್ಯೋತಿ ಪರಬ್ರಹ್ಮ'...
ಸರ್ಪಂಗಳ ಈಶ್ವರ ಭಟ್‌ರಿಂದ ದೀಪ ಬೆಳಗುವಿಕೆ



ಸಂಪಾದಕಿಯಿಂದ ಪ್ರಾಸ್ತಾವಿಕ ಮಾತು



**www.noopurabhramari.com**
ಕಂಜರ್ಪಣೆ ಅವರಿಂದ ಅನಾವರಣ

ಇತಿಹಾಸ ಕೃತಿ ಬಿಡುಗಡೆ





ಬಲ್ಲಿರೇನಯ್ಯ..ಕಲಾವಿದರಿಂದ ತಾಳಮದ್ದಳೆ
'ಶರಸೇತುಬಂಧ'




ಸಂಭ್ರಮಕ್ಕೆ ತೋರಣ ಕಟ್ಟಿದ
'ಭ್ರಮರಿ'ಯ ಬಳಗ



ವಿಶೇಷ ಸಂಚಿಕೆ ತೆರೆದುಕೊಂಡದ್ದು ಹೀಗೆ...
ಭಾಸ್ಕರ ಹೆಗಡೆ ಅವರಿಂದ

ವಿಳಾಸ: ನೂಪುರ ಭ್ರಮರಿ, 'ಸಾನ್ನಿಧ್ಯ' ಪ್ರಕಾಶನ, ದೇಚೂರು ರಸ್ತೆ, ಅಶ್ವತ್ಥಕಟ್ಟೆ ಸಮೀಪ,
ಮಡಿಕೇರಿಕೊಡಗು– ೫೭೧೨೦೧, ಫೋನ್ ನಂ: 9880592986, 9964140927,
ವೆಬ್‌ಸೈಟ್ : www.noopurabhramari.com
ಇ–ಮೈಲ್ ವಿಳಾಸ: feedback@noopurabhramari.com





# ಮಂಜೀರ

**ಆತ್ಮೀಯ ಓದುಗರೇ...**

**ವ**ರುಷದ ಹಿಂದೆ ನೃತ್ಯ ಮಂಟಪದ ನಟರಾಜೋತ್ಸವದಲ್ಲಿ ವಿದುಷಿ ರೂಪಾ ಉಪಾಧ್ಯ, ಶಕ್ತಿ ಯ ಬಿ. ಜಿ. ಅನಂತಶಯನ, ಡಾ। ನಡಿಬೈಲು ಉದಯಶಂಕರ್ ಅವರು ನೂಪುರ ಭ್ರಮರಿಯ ಮೊದಲ ಸಂಚಿಕೆಯನ್ನು ಅನಾವರಣಗೊಳಿಸುವ ಹೊತ್ತಿಗೆ ಇಷ್ಟೊಂದು ಆತಂಕ ಇರಲಿಲ್ಲವೇನೋ! ಆಗ ಇದ್ದದ್ದು–ಹೊಸ ಪತ್ರಿಕೆಯನ್ನು ಹುಟ್ಟುಹಾಕುವ ಹುಚ್ಚು, ಭವಿಷ್ಯದೆಡೆಗೆ ಒಂದಷ್ಟು ಸುಂದರ ಕನಸುಗಳು. ಆದರೆ ಕ್ರಮಿಸಿದ ವರುಷದ ಸಿಂಹಾವಲೋಕನವನ್ನು ಮಾಡುವ ಹೊತ್ತಿಗೆ, ಕನಸುಗಳನ್ನು ಮತ್ತಷ್ಟು ಸ್ಪಷ್ಟವಾಗಿ ಂಯೋಜಿಸುವ ಸಂದರ್ಭಕ್ಕೆ ಸಾಕಷ್ಟು ಆತಂಕಗಳು ಕಣ್ಣ ಮುಂದಿದ್ದವು.

'ಪತ್ರಿಕೆ ಸಾಕಷ್ಟು ಕಲಿಸಿಕೊಡುತ್ತದೆ, ಒಂದಷ್ಟು ವರುಷ ಕಳೆದರೆ ಅನುಭವಗಳ ಮೂಟೆಯೇ ಗಂಟು ಕಟ್ಟಿರುತ್ತದೆ. ಯಾವುದೇ ಪತ್ರಿಕೆಯಿರಲೀ, ಅದನ್ನು ನಡೆಸಿಕೊಂಡು ಹೋಗುವುದು ಸಿದ್ಧಾಂತ ಕಲಿತಷ್ಟು ಸುಲಭವಲ್ಲ' ಎಂದು 'ಚೈತ್ರರಶ್ಮಿ'ಯ ಗೆಳೆಯ ರಾಮು–ವಿನ ಅನುಭವದ ಮಾತು ಸುಳ್ಳಲ್ಲ. ಅದೂ ಸಾಂಸ್ಕೃತಿಕ ನೆಲೆಯ ಪತ್ರಿಕೋದ್ಯಮದ ಕೊಂಡಿಗಳು ಕಳಚಿಕೊಳ್ಳುತ್ತಿರುವಾಗ; ಅದೇ ಹಿನ್ನಲೆ–ಆಧಾರದ ಪ್ರದರ್ಶನ ಕಲೆಗಳ ಕುರಿತಾದ ಪತ್ರಿಕೆಯ ಜವಾಬ್ದಾರಿ ಸಾಕಷ್ಟು ಸವಾಲೆನಿಸಿದ್ದು ಹೌದು. ಅದರಲ್ಲೂ ನೂಪುರದ ಪ್ರಾರಂಭಕ್ಕೆ, ನಡೆಯುವ ಹಾದಿಗೆ, ಮಾತಾಡಿದವರಿಗಿಂತ ಮೂಗು ಮುರಿದ, ಮೂತಿ ತಿವಿದವರ ಸಂಖ್ಯೆಯೇ ಹೆಚ್ಚಿರುವಾಗ, ಭ್ರಮರಿಯ ಭ್ರಮಣದ ಅವಲೋಕನಕ್ಕೆ ಒಟ್ಟಾಗಿ ಎಲ್ಲರೂ ಮುಂದಾಗುವುದೆಂದರೆ ಸಂಭ್ರಮಗಳ ನಡುವೆಯೂ ಅದೊಂದು ರೀತಿಯ ಆತಂಕ !

ಈ ಆತಂಕ ಖಂಡಿತವಾಗಿಯೂ ಭ್ರಮರಿಯ ಅಸ್ತಿತ್ವದ ಕುರಿತಾಗಿ ಅಲ್ಲ. ಏಕೆಂದರೆ ಲಾಭ, ಹೆಸರು, ವಾಣಿಜ್ಯ ಉದ್ದೇಶಗಳಿಗಾಗಿಯೇ ಹುಟ್ಟಿಕೊಂಡ ಪತ್ರಿಕೆಯಾಗಿದ್ದರೆ ಅದರ ಭವಿಷ್ಯ ಲಾಭ–ನಷ್ಟಗಳ ಲೆಕ್ಕಾಚಾರದಲ್ಲಿ ನಿಂತುಹೋಗಿಬಿಡುತ್ತಿತ್ತೇನೋ ! ಆದರೆ ನೂಪುರ ಹುಟ್ಟಿಕೊಂಡದ್ದು ನಮ್ಮೊಳಗಿನ ಅರಿವಿಗೆ ಕಿಚ್ಚು ಹಚ್ಚಲು, ಹಚ್ಚಿದ ಕಿಚ್ಚಿನ ಕಾವು ಹಂಚಿಕೊಳ್ಳಲು; ಕಲೆಯ ಪ್ರೀತಿಗೆ, ನಮೆಲ್ಲರ ಸಮಾಲೋಚನೆ–ತೃಪ್ತಿ–ನೆಮ್ಮದಿಗಳ ರೀತಿಗೆ, ಸೌಹಾರ್ದ ಸಂಬಂಧಗಳ ನಿರೂಪಣೆಗೆ, ಕಲಾಪ್ರಜ್ಞೆಯನ್ನೂ ಒಳಗೊಂಡಂತೆ ನಮ್ಮೆಲ್ಲರ ಉತ್ಥಾನಕ್ಕೆ ! ಈ ಹಂಬಲ ನಿತ್ಯ ನಿರತ ! ಹಾಗಾಗಿ ವಾರ್ಷಿಕ ಸಂಭ್ರಮವೆಂಬುದು ನಮ್ಮ ಭಾವ–ಅನುಭವ–ಸಂತಸಗಳ ಮಿಲನವಾಯಿತೇ ಹೊರತು; ಲೆಕ್ಕಪತ್ರಗಳ, ವಾರ್ಷಿಕ ವರದಿ ವಾಚನಗಳ, ಹೊಗಳಿಕೆ–ಯಜಮಾನಿಕೆ–ಆಡಂಬರಗಳ ವಿನಿಮಯಕ್ಕೆ ವೇದಿಕೆಯಾಗಲಿಲ್ಲ.

ಆದರೆ ಆತಂಕ ಇದ್ದದ್ದು ಹೌದು! ನಮ್ಮಲ್ಲಿಲ್ಲದ ಓಲೈಸುವಿಕೆಯ ಸ್ವಾಗತೋಪಚಾರಕ್ಕೆ, ಔಪಚಾರಿಕತೆಯ ಬೆನ್ನು ಚಪ್ಪರಿಸಬಾರದೆಂದಿದ್ದ ಹಟಕ್ಕೆ ! ಯಾವುದೇ

***ಖಾಸಗಿ ಪ್ರಸಾರದ ದ್ವೈಮಾಸಿಕ, ಸಂಪಾದಕಿ : ಮನೋರಮಾ ಬಿ. ಎನ್***





ಒಂದು ವಿಷಯಕ್ಕೆ 'ಬ್ರಾಂಡ್' ಆಂತಲೋ, ಸಂಸ್ಥೆಯ ಮುಖವಾಣಿ ಅಂತಲೋ ಆಗದೆ; ಯಾರ ಮಾತಿಗೂ–ಮರ್ಜಿಗೂ ಕಾಯದೇ ಪತ್ರಿಕೆಯನ್ನು ಅದರದ್ದೇ ಆದ ಧರ್ಮದಲ್ಲಿ ನಡೆಸಿಕೊಂಡು ಹೋಗಬೇಕೆನ್ನುವ ಪುಟ್ಟ ಆದರ್ಶಕ್ಕೆ! ಆಗಷ್ಟೇ ಪತ್ರಿಕೆಯೂ ನಮ್ಮನ್ನು ಪ್ರೀತಿಸಬಲ್ಲುದು; ಅಂತಹ ಪ್ರೀತಿ ನಮಗೆ ಎಂದೆಂದಿಗೂ ಬೇಕು ಎಂಬ ನಂಬಿಕೆಗೆ!

ಸಹಕರಿಸಿದವರನ್ನು ಸ್ಮರಿಸುವುದು ನಮ್ಮ ಗುಣ. ಆದರೆ ಅದೇ ಹೆಚ್ಚುಗಾರಿಕೆಯೆನಿಸಬಾರದು, ಮೌಲ್ಯವನ್ನು ಕಡಿಮೆ ಮಾಡಬಲ್ಲುದೆಂದು ಬಳಗದ ತರ್ಕ. ಈ ಹಿನ್ನಲೆಯಲ್ಲಿ ಸಂಪಾದಕೀಯವನ್ನೂ ಒಳಗೊಂಡಂತೆ ಪತ್ರಿಕೆಯ ಪ್ರತೀ ಪುಟಕ್ಕೂ ರೂಪುರೇಷೆ, ಆಯಾಮಗಳನ್ನು ಹಾಕಿದ್ದಿದೆ. ಆದರೆ ಸಾಮಾನ್ಯವಾಗಿ ನಮ್ಮ–ನಿಮ್ಮೆಲ್ಲರನ್ನೂ ಕಾಡುವ ಕಾಯಿಲೆಯೊಂದಿದೆ ; ಔಪಚಾರಿಕ ಮಾನ್ಯತೆಗಳ ಬಗ್ಗೆ ನಿರೀಕ್ಷೆ, ಆಡಂಬರಿಕೆ, ಓಲೈಸುವಿಕೆ, ಪ್ರಚಾರಪ್ರಿಯತೆ ! ಕಲಾವಿದರನೇಕರು ಇದರ ಸಂತ್ರಸ್ತರು. ಈ ನಿಟ್ಟಿನಲ್ಲಿ ಬೇಸರದ ಬಿಸುಪುಗಳೇಳುವ ಭಯವಿತ್ತು. ಆದರೆ ಕರ್ನಾಟಕದ ಗಡಿಯನ್ನೂ ಮೀರಿ ಮುಂಬೈ, ದೆಹಲಿ, ಯುಎಸ್‌ಎ ವರೆಗೂ ವಿಸ್ತರಿಸಿ ಪ್ರಶಂಸೆ ಗಳಿಸುತ್ತಿರುವ ನೂಪುರವನ್ನು ಪ್ರೀತಿಸುವ ಓದುಗ ಬಳಗವಿದೆ. ಆತ್ಮೀಯವಾಗಿ ವಿಚಾರಿಸಿಕೊಳ್ಳುವ ಬಂಧುರ ಬಂಧದ ಬಳಗ ಭರವಸೆಗಳನ್ನಿತ್ತಿದೆ. ಹಾಗಾಗಿ, ಪ್ರೀತಿಪಾತ್ರರೆಲ್ಲಾ ಪ್ರೀತಿಯಿಟ್ಟು ಬಂದಿದ್ದರು.

ವರುಷದ ಹಾದಿಯಲ್ಲಿ ಸಾಕಷ್ಟು ಕಲಿಸಿಕೊಟ್ಟಿದೆ ನೂಪುರ ಭ್ರಮರಿ. ಮೆಚ್ಚುಗೆ, ನಿಂದನೆ, ಅವಮಾನ, ತೆಗಳಿಕೆ, ಶಹಬ್ಬಾಸ್, ಪ್ರೋತ್ಸಾಹ...ಹೀಗೆ ಗಮ್ಯದ ಹಾದಿಗೆ ನೋವು, ನಲಿವಿನ ಮಬ್ಬಾದ ಕಣ್ಣುಗಳ ಮಾತು, ಮೌನ! ಪ್ರತೀ ಸಂಚಿಕೆಯ ಹುಟ್ಟಿನಲ್ಲೂ ಆಗ ತಾನೇ ಹುಟ್ಟಿದ ಕೂಸಿನ ತಂದೆತಾಯಂತೆ ಖುಷಿಯ ಸಾಕ್ಷಾತ್ಕಾರ!. ಈ ಚಲನಶೀಲತೆಯನ್ನು ನೂಪುರಭ್ರಮರಿಯ ಪ್ರತೀ ಹೆಜ್ಜೆಯಲ್ಲೂ ನಾವು ಕಾಣಬೇಕು ಎಂಬುದೇ ನಮ್ಮ ಅಪೇಕ್ಷೆ. ಹಾಗಾಗಿ ಸಂಪಾದಕಿಯಾಗಿ ನನ್ನ ಮತ್ತು ನಮ್ಮ ಬಳಗದ ಪತ್ರಿಕೆಯಷ್ಟೇ ಅಲ್ಲ,..ನೂಪುರ ಭ್ರಮರಿ! ನಮ್ಮ–ನಿಮ್ಮೆಲ್ಲರದು, ಕಲೆಯದ್ದು! ಅದರ ಸುಖ–ದುಃಖಗಳಲ್ಲಿ ಪ್ರತಿಯೊಬ್ಬರದೂ ಸಮಪಾಲು. ನಮ್ಮೆಲ್ಲರ ಪ್ರೀತಿ, ನಮ್ಮೆಲ್ಲರ ಜವಾಬ್ದಾರಿಯಿದು.

ವಾರ್ಷಿಕ ಸಂಭ್ರಮದ ಅಧ್ಯಕ್ಷ ಸರ್ಪಂಗಳ ಈಶ್ವರ ಭಟ್ಟರು ನೂಪುರದ ಅವಲೋಕನ ಮಾಡುತ್ತಾ ಹೇಳಿದ್ದು ಇದನ್ನೇ.. 'ಕಲೆಯ ಕುರಿತಾದ ಪತ್ರಿಕೆ ನಡೆಸುವುದು ನಿಜವಾಗಿಯೂ ಒಂದು ಸಂಘರ್ಷ. ಯಾವುದೇ ವಿಷಯ ಸೀಮೋಲ್ಲಂಘನ ಮಾಡಿದೆ ಅಂತಾದರೆ, ನಂತರದ ದೃಷ್ಟಿ ಅನಂತದತ್ತಲೇ' !


ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನವಿರಲಿ...ಏನಂತೀರಿ?

ಪ್ರೀತಿಯಿಂದ ನಿಮ್ಮ

***ಸಂಪಾದಕಿ***

## ಶುಕತುಂಡ

## ಹಸ್ತ ಮಯೂರಿ



**ಲಕ್ಷಣ:** ಅರಾಳ ಹಸ್ತದಲ್ಲಿನ ಉಂಗುರ ಬೆರಳನ್ನು ಬಾಗಿಸಿದರೆ ಶುಕತುಂಡ ಹಸ್ತ. ಶುಕತುಂಡ-ಗಿಳಿಯ ಮುಖ ಅಥವಾ ಕೊಕ್ಕಿನಂತೆ ತೋರುತ್ತದೆ. ಪಾರ್ವತಿಯು ಶಿವನೊಂದಿಗಿನ ಪ್ರಣಯವೇಳೆ ಜಗಳದಲ್ಲಿ ಈ ಹಸ್ತವನ್ನು ಬಳಸಿದಳೆನ್ನಲಾಗಿದೆ. ಇದರ ಬಣ್ಣ ಕೆಂಪು, ಬ್ರಾಹ್ಮಣ ವರ್ಣ ದೂರ್ವಾಸ ಋಷಿ, ಮರೀಚಿ ದೇವತೆ.

**ವಿನಿಯೋಗ:** ಬಾಣ ಪ್ರಯೋಗ ಮಾಡುವುದು, ಈಟಿ ಹಿಂದಿನ ಹುಟ್ಟು ಬೆಳವಣಿಗೆಯ ನೆನಪು, ಗೋಪ್ಯ ಭಾವ ಕಠಿಣವಾದ ಮಾತು, ಕೋಪ ಮುಂತಾದ ಭಾವಗಳು, ಶೂಲ ಅತಿರೇಕ ಸ್ವಭಾವ, ಭಯೋತ್ಪಾದ ಮೈದೋರುವಿಕೆ.

**ಇತರೆ ವಿನಿಯೋಗ:** ಚಾಳೀಯನಾಟ್ಯ, ಮಾರ್ಮಿಕ ವಚನ, ಗಿಳಿ, ಕೆಂಪು ಬಣ್ಣ, ಊಹೆ, ಕೌಟಿಲ್ಯ, ಲೇಖನ, ಸರ್ಪನೃತ್ಯ, ನಿಷೇಧ, ದಾರಿತೋರುವುದು, ಏಡಿಯನಡಿಗೆ, ದೊಣ್ಣೆಕೇತನು ತಲೆಯಾಡಿಸುವುದು, ಒಣಗಿದ ಎಲೆಯ ನಡುಕ, ಆಮೆ, ಈರ್ಷ್ಯಾ ಪ್ರಣಯ ಕಲಹಗಳಲ್ಲಿ 'ನಾನಲ್ಲಿ, ನೀನಲ್ಲಿ, ಇದನ್ನು ಮಾಡಕೂಡದು' ಮುಂತಾದವನ್ನು ಹೇಳಲು, ತಿರಸ್ಕಾರದಿಂದ 'ಬಾ , ಹೊರಟು ಹೋಗು' ಎನ್ನಲು, ಆವಾಹನೆ, ಬೀಳ್ಕೊಡುಗೆ, ತಿರಸ್ಕಾರದಿಂದ 'ಛೀ' ಎನ್ನುವುದು, 'ಹೀಗಾಗಬಾರದು' ಎನ್ನುವ ಮಾತು, 'ನಾನಲ್ಲ - ನೀನಲ್ಲ' ಎನ್ನುವುದು. ಅವಮಾನ ಮಾಡಿ 'ಹೋಗು' ಎನ್ನುವುದು, ಧಿಕ್ಕಾರ, ದಾಳಬಿಡುವುದು, ಕರೆಯುವುದು ಇವುಗಳನ್ನು ಸಂವಹಿಸುತ್ತದೆ. ನಾನಾರ್ಥ ಹಸ್ತಗಳ ವಿಭಾಗದಲ್ಲಿ ಶುಕತುಂಡವನ್ನು ನಿಶ್ಚಲವಾಗಿ ಹಿಡಿದು 'ಬರುವ ವರ್ಷ' ಎಂದು ಸೂಚಿಸಲು ಬಳಸುತ್ತಾರೆ.

ಸಾರಸಂಗ್ರಹದ ಪ್ರಕಾರ ಉಂಗುರದ ಬೆರಳನ್ನು ಮಾತ್ರ ಮಡಿಸಿದರೆ ಅದು ಶುಕತುಂಡವೆನ್ನಲಾಗಿದ್ದು, ಭಿಂಡಿವಾಳವೆಂಬ ಆಯುಧ, ಭವಿಷ್ಯದ ಸೂಚನೆ, ಭ್ರಮಣ, ಕಪಟ, ಜ್ಞಾನ, ಹೆಚ್ಚು ಭಯ ಮುಂತಾದುವುಗಳನ್ನು ಸಂವಹಿಸಬಹುದು. ಶುಕತುಂಡದ ಮಧ್ಯ ಬೆರಳು ಕೊಂಕಿದ್ದು, ಹೆಬ್ಬೆರಳು ವರ್ತುಲವಾಗಿದ್ದರೆ ಅಂತಹ ಹಸ್ತವನ್ನು **'ಸ್ಖಲಿತಾ'** ಎಂದು ನರ್ತನ ನಿರ್ಣಯದಲ್ಲಿ ಉಲ್ಲೇಖಿಸಲಾಗಿದೆ. ಇದರ ಬಳಕೆ ಕಡಿಮೆ. ಗಿಡುಗ (ಶಪಾಡನ) ಪಕ್ಷಿಯನ್ನು ಸೂಚಿಸಲು **'ಬ್ರಹ್ಮೋಕ್ತ ಶುಕತುಂಡ'**ವೆಂಬ ಹಸ್ತವನ್ನು ಬಳಸಲಾಗುತ್ತಿತ್ತಂತೆ!

**(...೭ನೇ ಪುಟಕ್ಕೆ)**





## ✲✲ ವಾರ್ಷಿಕ ಸಂಭ್ರಮ...ಒಂದಷ್ಟು ನೆನಪು... ✲✲

**ಅಂದು ಫೆಬ್ರವರಿ ೧೦..,**ಮಡಿಕೇರಿಯ ಭಾರತೀಯ ವಿದ್ಯಾಭವನದ ತುಂಬೆಲ್ಲಾ ಹರುಷ, ನಗುವಿನ ವಾತಾವರಣ. ಸಮಾಧಾನದ ತಯಾರಿಗಳ ನಡುವೆಯೇ ಗಡಿಬಿಡಿಯ ಓಡಾಟ–ಭರಾಟೆಗಳು, ಕೊನೆಯ ಕ್ಷಣದ ಕನವರಿಕೆ–ನಿರೀಕ್ಷೆಗಳು, ಎದೆ ಅವಲಕ್ಕಿ ಕುಟ್ಟುತ್ತಿತ್ತು.

...ಆತಂಕಗಳಿಗೆ ಸಮಾಧಾನ ಹೇಳಿದರು.., 'ಸಂಭ್ರಮ'ದ ಅಧ್ಯಕ್ಷೀಯ ನೆಲೆಯಲ್ಲಿ ಮಾತನಾಡಿದ ಮಡಿಕೇರಿ ಕೇಂದ್ರೀಯ ವಿದ್ಯಾಲಯದ ಪ್ರಾಂಶುಪಾಲರಾದ ಶ್ರೀ ಸರ್ಪಂಗಳ ಈಶ್ವರ ಭಟ್. ಕಲಾವಿದರ ಸಿಟ್ಟು– ಸೆಡವು–ಪ್ರತಿಭೆಗಳನ್ನು ಸೂಕ್ಷ್ಮವಾಗಿ ಗಮನಿಸುವ ಅವರು, ಸ್ವತಃ ಗುಣಮಟ್ಟದ ಸಜ್ಜನ ಯಕ್ಷಗಾನ ಕಲಾವಿದರು ಕೂಡಾ! 'ಜಗತ್ತಿನಲ್ಲಿ ಕೆಲವೊಂದಕ್ಕೆ ಜನರ ಭೇಟಿ ಕಡಿಮೆಯಾಗುತ್ತದೆ ಎಂದ ಮಾತ್ರಕ್ಕೆ ಅದರ ಬೆಲೆ ಕಡಿಮೆಯಾಗೋದಿಲ್ಲ. ಕಲೆ ಎಂದರೇನು ಎಂಬುದನ್ನು ನಾವು ಅರಿತುಕೊಳ್ಳಬೇಕು. ಹಾಗಾದಾಗ ಮಾತ್ರ ಕಲೆಯ ನಿಜವಾದ ಮಹತ್ವ ತಿಳಿಯುತ್ತದೆ. ಕಲೆಯ ಬಗ್ಗೆ ಪ್ರೀತಿಯಿರುವವರು ಅದರ ಕುರಿತಾಗಿ ಮಾಡುವ ಪ್ರಯತ್ನಗಳ ಬಗ್ಗೆಯೂ ಗೌರವ ಹೊಂದಿರುತ್ತಾರೆ' ಎನ್ನುವ ಹುರುಪಿನ ನಲ್ನುಡಿ– ಉಪಸ್ಥಿತರಿದ್ದ ಗುಣಮಟ್ಟದ ಪ್ರೇಕ್ಷಕರಿಗೆ ಪ್ರಶಂಸೆ ಮಾತ್ರವಲ್ಲ, ಬೇಯುವ ಮನಸ್ಸಿಗೆ ಸೂಕ್ಷ್ಮ ಸೂಚನೆ!

ನೂಪುರ ಭ್ರಮರಿಯನ್ನು ಸುಂದರವಾಗಿ ವ್ಯಾಖ್ಯಾನಿಸಿದ ಅವರು, 'ಮಗುವು ಅನ್ನಪ್ರಾಶನ್ನದ ಮೂಲಕ ಧಾರಣಾಶಕ್ತಿಯನ್ನು ಪಡೆದುಕೊಳ್ಳುತ್ತದೆ. ಅಂತೆಯೇ ಪತ್ರಿಕೆಯು ಅಂತರ್ಜಾಲಕ್ಕೆ ಪ್ರವೇಶ ಮಾಡುವ ಮೂಲಕ ಧಾರಣಶಕ್ತಿಯನ್ನು ಪಡೆದುಕೊಂಡಿದೆ. ಹೂವಿಂದ ಹೂವಿಗೆ ಹಾರುತ್ತಾ, ತಿರುಗುತ್ತಾ ಬರುವ ದುಂಬಿ ಝೇಂಕರಿಸುವಾಗ, ಆ ನಾದ ಓಂಕಾರದೊಡನೆ ಬೆರೆತು ಕೇಳುಗರ ಕಿವಿಗೆ, ನೋಡುವ ಕಣ್ಣಿಗೆ ಆನಂದಾಹ್ಲಾದವನ್ನು ಉಂಟುಮಾಡುತ್ತದೆ! ಆ ಪರಿಭ್ರಮಣದ ಚಲನೆಯೇ ಭ್ರಮರಿ. ಬ್ರಹ್ಮಾನಂದಕ್ಕೆ ದಾರಿ! ಇಂತಹ ಆನಂದವನ್ನು ಆಸ್ವಾದಿಸಲು ಬರುವ ಆಸಕ್ತ–ಭ್ರಮರಗಳು ನೂಪುರ ಭ್ರಮರಿಯ ಮೂಲಕ ನೃತ್ಯವನ್ನು ಸುತ್ತುವರಿಯುತ್ತಾ ಅದರ ಸವಿಯನ್ನು ಪಡೆಯುತ್ತಿವೆ ! ಜೀವನಚಕ್ರದಲ್ಲಿ ನಾವೆಲ್ಲರೂ ಭ್ರಮರಿಗಳೇ! ಭ್ರಮರಗಳ ಭ್ರಮರೀನಾದ ಸದಾ ನಮ್ಮೆಲ್ಲರನ್ನು ತುಂಬುತ್ತಿರಲಿ' ಎಂದು ಆಶೀರ್ವದಿಸಿದರು.

ನಮ್ಮೆಲ್ಲರಿಗೂ ಪತ್ರಿಕೋದ್ಯಮದ ಗುರುಗಳೆನಿಸಿದ ಉಜಿರೆ ಕಾಲೇಜಿನ ಪತ್ರಿಕೋದ್ಯಮ ವಿಭಾಗದ ಮುಖ್ಯಸ್ಥ ಶ್ರೀ ಭಾಸ್ಕರ ಹೆಗಡೆ ದೂರದ ಉಜಿರೆಯಿಂದ ತಮ್ಮ 'ಬಿಸಿ ಶೆಡ್ಯೂಲ್' ಗಳಿಗೆ ಕೊಂಚ ಮಟ್ಟಿನ 'ಬ್ರೇಕ್' ಕೊಟ್ಟು ಬಂದ್ದಿದ್ದರು. ಜೊತೆಗೆ, ಉಜಿರೆಯ ಬುಟ್ಟಿ ತುಂಬ ಶುಭಾಶಯಗಳು, ಹಾರೈಕೆಗಳನ್ನು ಹೊತ್ತು ಬಂದ ಅವರು,

ಮನೆಯವರಲ್ಲೊಬ್ಬರಾಗಿ ಹೋಗಿದ್ದರು. 'ಸಂಭ್ರಮ'ದ ದೀಪವನ್ನು ಪ್ರಜ್ವಾಲಿಸಿ, ನೂಪುರ ಭ್ರಮರಿಯ ವಿಶೇಷ ಸಂಚಿಕೆಯನ್ನು ಬಿಡುಗಡೆ ಮಾಡಿ ಬೆನ್ನು ತಟ್ಟುವ, ಅನುಭವದ ಮಾತುಗಳನ್ನಾಡಿದರು. ಪ್ರಸ್ತುತ ಭಾರತೀಯ ಕಲೆಗಳ ಬಗ್ಗೆ ಪಾಶ್ಚಿಮಾತ್ಯರು ಆಸಕ್ತರಾಗಿ ಅದನ್ನು ತಿಳಿದುಕೊಳ್ಳುವ ಪ್ರಯತ್ನಗಳಿಗೆ ಮುಂದಾಗಿದ್ದಾರಾದರೂ, ಇದಕ್ಕೇ ಸ್ಥಳೀಯರು ಮಾತ್ರ ಅಪವಾದವೆಂಬಂತೆ ಪಾಶ್ಚಿಮಾತ್ಯ ಸಂಸ್ಕೃತಿಯ ಅನುಕರಣೆಗೆ ಮುಂದಾಗುತ್ತಿದ್ದಾರೆ ಎನ್ನುವುದು ಅವರ ವಿಷಾದ. ಅವರ ಆಶೀರ್ವಾದ ನಮಗೆಲ್ಲರಿಗೂ ಶ್ರೀರಕ್ಷೆ., ಭ್ರಮರಿಯ ಕುರಿತಾಗಿ ಇತ್ತೀಚೆಗೆ 'ಮಂಜುವಾಣಿ'ಯಲ್ಲಿ ಬರೆದ ಅವರ ಅಂಕಣ ಬರಹ ನಮಗೆ ಸ್ಫೂರ್ತಿ.

ನೂಪುರದ ಪ್ರಾರಂಭಕ್ಕೆ ಪ್ರಥಮ ಪ್ರತಿಕ್ರಿಯೆ ನೀಡಿ ಸಲಹೆಗಳನ್ನಿತ್ತವರಲ್ಲಿ ಖ್ಯಾತ ಸಾಹಿತಿ, ವಿಮರ್ಶಕ, ನ್ಯಾಯವಾದಿ ಬಾಲಸುಬ್ರಹ್ಮಣ್ಯ ಕಂಜರ್ಪಣೆ ಮೊದಲಿಗರು. ಅವರು 'ಸಂಭ್ರಮ'ದ ಮುಖ್ಯ ಅತಿಥಿಗಳಲ್ಲೊಬ್ಬರು. ವೆಬ್‌ಸೈಟ್ ಅನಾವರಣಗೊಳಿಸಿದ ಅವರು, 'ನೃತ್ಯ ಕಲೆಯ ಮಾಹಿತಿಯನ್ನೊದಗಿಸುವ ವೆಬ್‌ಸೈಟ್ ಆರಂಭಿಸುವುದು ಸಣ್ಣ ಸಾಧನೆಯೇನಲ್ಲ. ಹಾಗೆಯೇ ಸಿದ್ಧಿಯೂ ಅಲ್ಲ. ಅದನ್ನು ಮುನ್ನಡೆಸಿಕೊಂಡು ಹೋಗುವ ಜವಾಬ್ದಾರಿ ಬಹಳಷ್ಟಿದೆ. ವೈಯಕ್ತಿಕವಾಗಿ ನಮಗೆ ನಮ್ಮ ಆರು ತಲೆಮಾರುಗಳ ಬಗೆಗೆ ಮಾಹಿತಿಯಿದ್ದರೂ ಅವರ ಹಿಂದಿನವರ ಬಗ್ಗೆ ಮಾಹಿತಿಯಿರುವುದಿಲ್ಲ. ಆದರೆ ಶಂಕರಾಚಾರ್ಯರಂತವರು ಕಾಲ ದೇಶಗಳನ್ನು ಮೀರಿದ ಸಾಧನೆಯ ಮೂಲಕ ಇಂದಿಗೂ ನಮ್ಮ ಮನದಾಳದಲ್ಲಿ ಚಿರಸ್ಥಯಿಯಾಗಿ ಉಳಿದಿದ್ದಾರೆ. ಅಂತಹ ಸಾಧನೆಯ ಮೂಲಕ ಎತ್ತರೆತ್ತರಕ್ಕೆ ಏರಬೇಕು' ಎಂದು ಮಾತನಾಡಿ ನಾವು ಭವಿಷ್ಯದಲ್ಲಿ ಏರಬೇಕಾದ ಮಜಲುಗಳ ನಕ್ಷೆ ಹಾಕಿಕೊಟ್ಟರು.

'ಪ್ರಸ್ತುತ ನಾವಿರುವ ವ್ಯವಸ್ಥೆಯಲ್ಲಿ ಜ್ಞಾನದ ಕಡೆಯಿಂದ ಮಾಹಿತಿಯ ಕಡೆಗೆ ಹೋಗುತ್ತಿದ್ದೇವೆ. ಯಾವುದೇ ಒಂದು ವಿಷಯದ ಆಳವಾದ ಅಧ್ಯಯನ ಮತ್ತು ಹೆಚ್ಚಿನ ಜ್ಞಾನ ಸಂಪಾದನೆಯ ಹಾದಿಯಲ್ಲಿನ ಸಾಧಕರು ಕಡಿಮೆಯಗುತ್ತಿದ್ದಾರೆ. ಪ್ರಸ್ತುತ ಸಾಧನೆಯ ಹಾದಿಯಲ್ಲಿ ಪ್ರಸಿದ್ಧಿಯನ್ನೇ ಯಶಸ್ಸೆಂದು ತಪ್ಪು ತಿಳಿಯುವ ಸಾಧ್ಯತೆಗಳಿವೆ. ಕಲಾವಿದ ಅಂತಹ ಅಪಾಯಗಳಿಂದ ಪಾರಾಗಬೇಕು. ಪ್ರಸಿದ್ಧಿ ಎನ್ನುವುದು ಹೇಗೆ ಬರುತ್ತದೋ ಎನ್ನುವುದು ತಿಳಿಯಲಾರದು. ಅದು ಆಕಸ್ಮಿಕವಾಗಿಯೂ ದೊರಕಿಬಿಡಬಹುದು. ಆದರೆ ಸಾಧನೆಗೆ ಎಂದಿಗೂ ಆ ರೀತಿಯ ಯಶಸ್ಸು ದೊರಕಲಾರದು. ಗುರಿಯೆಡೆಗಿನ ನಿರಂತರವಾದ ಸಾಧನೆ ಯಶಸ್ಸನ್ನು ತಂದುಕೊಡುತ್ತದೆ. ಕಲೆಯ ಮೂಲಕ ವರ್ತಮಾನದಿಂದ ಭವಿಷ್ಯಕ್ಕೆ ಮುನ್ನಡೆಸುವ ಕಾಯಕ ಆಗಬೇಕು' ಎನ್ನುವ ಅವರ ಮಾತು ಎಂದೆಂದಿಗೂ ನಿತ್ಯ ಸತ್ಯ.

'ಯಾವುದೇ ದೇವಾಲಯದ ಪುಸ್ತಕದ ಕುರಿತಾದ ಸ್ಥಳದ ಇತಿಹಾಸ, ಕಾರ್ಣಿಕ, ಮಾಹಿತಿಯನ್ನು ತಿಳಿಯದೆ ಕ್ಷೇತ್ರದರ್ಶನ ಪೂರ್ಣಗೊಳ್ಳುವುದಿಲ್ಲ' ಎಂದಿದ್ದರು ಈಶ್ವರ





ಭಟ್. ಅದಕ್ಕೆ ಪೂರಕವಾಗಿ ನಮ್ಮದೇ 'ಸಾನಿಧ್ಯ' ಪ್ರಕಾಶನದಿಂದ ೫ ವರ್ಷಗಳ ಹಿಂದೆ ಭವ್ಯ ಸಮಾರಂಭದಲ್ಲಿ ಬಿಡುಗಡೆ ಕಂಡ ಮಡಿಕೇರಿಯ ಇತಿಹಾಸ ಪ್ರಸಿದ್ಧ ಓಂಕಾರೇಶ್ವರ ದೇವಾಲಯದ ಕೃತಿಯ ಪರಿಷ್ಕೃತ ಪ್ರತಿಯನ್ನು ಮಡಿಕೇರಿ ಭಾರತೀಯ ವಿದ್ಯಾಭವನದ ಉಪಾಧ್ಯಕ್ಷರಾದ ಮತ್ತೋರ್ವ ಮುಖ್ಯ ಅತಿಥಿ ಕೆ. ಎಸ್. ದೇವಯ್ಯ ಅವರು ಅನಾವರಣ ಮಾಡಿ ಮೆಚ್ಚುಗೆಯ ಮಾತನ್ನಾಡಿದರು.

ಹಿರಿಯರಾದ ಡಾ। ಎಂ. ಜಿ. ಪಾಟ್ಕರ್ ಸಭಾಂಗಣವನ್ನು ಒದಗಿಸಿಕೊಟ್ಟಿದ್ದರು. 'ಸಾನಿಧ್ಯ' ಪ್ರಕಾಶನದ ಪ್ರಕಾಶಕರಾದ ವೇದಮೂರ್ತಿ ಬಿ. ಜಿ. ನಾರಾಯಣ ಭಟ್, ಸಾವಿತ್ರಿ ಬಿ. ಎನ್, ಕಲಾಪೋಷಕರಾದ ಡಾ। ನಡಿಬೈಲು ಉದಯಶಂಕರ್, ಸ್ವಾತಿ, ರಾಮಕೃಷ್ಣ ಭಟ್, ಶಾರದಾ ಮಂದಪ್ಪ, ಪುರುಶೋತ್ತಮ ಭಟ್, ಕಲಾವಿದರು, ಉಪನ್ಯಾಸಕರು ವಾರ್ಷಿಕ ಸಂಭ್ರಮಕ್ಕೆ ತೋರಣ ಕಟ್ಟಲು ನೆರೆದಿದ್ದರು. ಅಸೀಮಾ ಆಂಗ್ಲ ಮಾಸಿಕದ ಕಾರ್ಯ ನಿರ್ವಾಹಕ ಸಂಪಾದಕ ಯು. ಮಹೇಶ್ ಪ್ರಭು, ಕನ್ನಡಪ್ರಭದ ಮಹೇಶ್ ಚೇವಾರ್, ಶಕ್ತಿ, ಆಂದೋಲನ, ಇಂಡಿಯನ್ ಎಕ್ಸ್‌ಪ್ರೆಸ್‌ನ ಪತ್ರಕರ್ತಮಿತ್ರರು ಹಾಜರಿದ್ದರು.

ನನ್ನೆಲ್ಲ ಸಿಟ್ಟು, ಗಡಿಬಿಡಿ, ಆತಂಕಗಳನ್ನು ಪ್ರೀತಿಯಿಂದಲೇ ಸಹಿಸುವ ಬಳಗದ ಒಲುಮೆಯ ವಿಷ್ಣುಪ್ರಸಾದ್ ನಿಡ್ವಾಜೆ, ರಾಧಿಕಾ ವಿಟ್ಲ, ಪ್ರಿಯಾ. ಎಂ. ಕೆರ್ವಾಶೆ, ಶ್ವೇತಾ, ತಮ್ಮ ರಾಜಗೋಪಾಲ್, ಲಕ್ಷ್ಮಣ, ಸುಬ್ರಹ್ಮಣ್ಯ ನೂಪುರದ ಅಂಗಳದ ತುಂಬಾ ಸಂಭ್ರಮದಿಂದ ಓಡಾಡಿಕೊಂಡಿದ್ದರು. ಸಹೋದರ ಅಕ್ಷಯರಾಮ ಕಾವಿನಮೂಲೆ ಪ್ರಾರ್ಥನೆಯ ಮೂಲಕ ಶುಭಾರಂಭ ನೀಡಿದರೆ, ವೆಬ್‌ಸೈಟ್‌ನ್ನು ನಿರ್ವಹಿಸುವ, ಅಕ್ಕರೆಯಿಂದಲೇ 'ಮನು ಅಕ್ಕ' ಎನ್ನುವ ಅಣ್ಣ ಮಹೇಶ್ ಎಲ್ಯಡ್ಕ ಸುಂದರವಾಗಿ ವೆಬ್‌ಸೈಟ್‌ನ್ನು ಪರಿಚಯಿಸಿದರು. ಪ್ರೀತಿಯಿಂದಲೇ ಜಗಳವಾಡುವ ಗೆಳೆಯ, ನಮ್ಮದೇ ಬಳಗದ ಚೈತ್ರರಶ್ಮಿ ಮಾಸಿಕದ ಸಂಪಾದಕ ಸಿ. ಎಸ್. ರಾಮಚಂದ್ರ ಹೆಗಡೆ ಕೊನೆಗೆ ವಂದನೆ ಸಲ್ಲಿಸಿದರು. ಅಚ್ಚುಕಟ್ಟಾದ, ಆಕರ್ಷಕ ನಿರೂಪಣೆ ಮಾಡುವ ಗೆಳತಿ ಶ್ರೀಲಕ್ಷ್ಮಿ ಸಮಾರಂಭದ ಹೈಲೈಟ್ !

ಇದೇ ಸಂದರ್ಭದಲ್ಲಿ ಮಡಿಕೇರಿಯ ಎಫ್‌ಎಂಸಿ ಕಾಲೇಜಿನಲ್ಲಿ ಹೊಸತಾಗಿ ಅಸ್ತಿತ್ವಕ್ಕೆ ಬಂದ, ಉಪನ್ಯಾಸಕ–ವಿದ್ಯಾರ್ಥಿಗಳ ಸಂಘಟನೆ ಯಕ್ಷಕಲಾ ವೇದಿಕೆಯಿಂದ 'ಶರಸೇತುಬಂಧ' ಯಕ್ಷಗಾನ ತಾಳಮದ್ದಳೆ ಆಯೋಜಿಸಲಾಗಿತ್ತು. ಇಂದಿನ ಕಾಲ–ಸಂದರ್ಭಗಳಲ್ಲಿ ಸಾಂಸ್ಕೃತಿಕ ಕಾರ್ಯಕ್ರಮ ಭಾಗವಹಿಸುವುದಕ್ಕಿಂತ ಅದರ ಆಯೋಜನೆ ಎಷ್ಟರ ಮಟ್ಟಿಗೆ ದುಸ್ತರ ಎಂಬ ಅನುಭವ ಇತ್ತಾದರೂ, ಕಲಾವಿದರ ಅಲಭ್ಯತೆ, ಸಂಭಾವನೆ, ಸೂಕ್ತ ವ್ಯವಸ್ಥೆಯ ಹೊಂದಾಣಿಕೆ, ಓಡಾಟ, ಪರದಾಟ, ಕೊನೆ ಘಳಿಗೆಯ ಬದಲಾವಣೆ...ಹೀಗೆ, ಪ್ರತ್ಯಕ್ಷೀಕರಿಸಿಕೊಂಡ ಸಂಭ್ರಮವೂ ಅಲ್ಲಿತ್ತು. ಸಾಂಸ್ಕೃತಿಕ ಕಾರ್ಯಕ್ರಮಕ್ಕೆ ಆಸರೆಯಾಗಿ ನಿಂತ ಸಂಯೋಜಕ–ಕಲಾವಿದ ಮಹಾಬಲೇಶ್ವರ ಭಟ್, ಸಂಚಾಲಕ ರಾಜೀವ್ ಪೆರ್ಲ ಅವರ ಪ್ರೋತ್ಸಾಹ

ಸ್ಮರಣೀಯ. ಹಿಮ್ಮೇಳದಲ್ಲಿ ಭಾಗವತರಾಗಿ ಹರಿನಾರಾಯಣ ಭಟ್ ಪುಂಡಿಕ್ಯಾ, ಮದ್ದಳೆಯಲ್ಲಿ ರಾಘವ ಬಲ್ಲಾಳ್, ಚೆಂಡೆಯಲ್ಲಿ ರಾಜೇಂದ್ರಪ್ರಸಾದ್ ಪುಂಡಿಕ್ಯಾ, ಶ್ರುತಿಯಲ್ಲಿ ರಾಜೀವ ಪೆರ್ಲ ಅವರು ಸಹಕರಿಸಿದರು. ಮುಮ್ಮೇಳದಲ್ಲಿ ಅರ್ಜುನನಾಗಿ ಸರ್ಪಂಗಳ ಈಶ್ವರ ಭಟ್, ಹನುಮಂತನಾಗಿ ಗೋಪಾಲಕೃಷ್ಣಯ್ಯ, ವೃದ್ಧ ಬ್ರಾಹ್ಮಣನಾಗಿ ಮಹಾಬಲೇಶ್ವರ ಭಟ್ ಪಾತ್ರ ವಹಿಸಿದ್ದರು.

ನೀವೆಲ್ಲರೂ **www.noopurabhramari.com** ವೆಬ್‌ಸೈಟ್‌ನ್ನು ನೋಡಿದ್ದೀರಿ, ಮೆಚ್ಚಿದ್ದೀರಿ, ಸಲಹೆ ಸೂಚನೆಗಳನ್ನಿತ್ತಿದ್ದೀರಿ. ಹಾಗಾದರೆ ಗಮನಿಸಿರುತ್ತೀರಿ ತಾನೇ, ನೂಪುರದ ಅತ್ಯಾಕರ್ಷಕ ಲೋಗೋ ! ಅದು ಗೆಳೆಯರಾದ ವಿಘ್ನರಾಜ, ರಾಧಿಕಾ ಅವರ ಶ್ರಮ. ಈ ಬಾರಿಯ ಮುಖಪುಟದ ಕಲ್ಪನೆಯೂ ಅವರದ್ದೇ! ವಾರ್ಷಿಕ ವಿಶೇಷ ಸಂಚಿಕೆಯ ಪುಟವಿನ್ಯಾಸ ಮಿತ್ರ ಹರೀಶ್ ಅದೂರು ಅವರಿಂದ ಮೂಡಿದ್ದು.

ಒಟ್ಟಿನಲ್ಲಿ 'ಮೈಸೂರುಪಾಕಿ'ನ ಸಿಹಿಯಷ್ಟೇ ನಗು–ಒಲುಮೆ–ಸಂತಸದ 'ಸ್ಮೃತಿ'ಯ ಕ್ಷಣ. ಸಂಭ್ರಮದ ಪ್ರತಿಯೊಂದರಲ್ಲೂ ಹೊಸತಿನ ಕ್ಷಣದ ಅನಾವರಣವಿತ್ತು, ಓದು ಮತ್ತು ಕಲೆಯನ್ನು ಪ್ರೀತಿಸುವ ಒಂದೊಂದು ಕ್ಷೇತ್ರದ ಪ್ರತಿನಿಧಿಗಳಿದ್ದರು. ಸಮೃದ್ಧ ಓದಿಗಾಗಿ ಚೈತ್ರರಶ್ಮಿ, ಅಸೀಮಾ, ನೂಪುರ ಭ್ರಮರಿ ಕೂಡಾ !

ಕೊನೆಗೆ... ಯಶಸ್ವಿಯಾಗಿ ಮುಗಿದ ಕ್ಷಣಗಳೆಡೆಗೆ ಧನ್ಯತೆ ! ಬರುವ 'ಸಂಭ್ರಮ'ದ ಕ್ಷಣಗಳೆಡೆಗೆ ಪುಟ್ಟ ಕಾತರಿಕೆ !

▬ *ಮನೋರಮಾ ಬಿ. ಎನ್*

**(...೩ನೇ ಪುಟದಿಂದ)**

**ಶುಕತುಂಡ ಹಸ್ತ**

ವರುಷವನ್ನು, ಪಾಪನಾಶಿನಿ ನದಿಯನ್ನು, ಪಾತಾಳವೃಕ್ಷವನ್ನು, ಹರಿಶ್ಚಂದ್ರ ರಾಜನನ್ನು ಮತ್ತು ನಾದಿನಿ ಎಂದು ಸೂಚಿಸುವಾಗ ಶುಕತುಂಡವನ್ನು ಬಳಸಲಾಗುತ್ತಿತ್ತು. ಶುಕತುಂಡ ಹಸ್ತವನ್ನು ಕಂಪಿಸುವುದು ಸಂಗೀತದಲ್ಲಿನ ಮಧ್ಯಮ ಸ್ವರವನ್ನು ಸೂಚಿಸಿದರೆ, ಶುಕತುಂಡದಿಂದ ಹೆಬ್ಬೆರಳು ಮತ್ತು ಕಿರುಬೆರಳನ್ನು ನೀಡಿ, ಕೈಯನ್ನು ಅಲ್ಲಾಡಿಸುವುದು ಭರಣೀ ನಕ್ಷತ್ರದ ಸೂಚಕ. ಶುಕತುಂಡದ ಎಲ್ಲಾ ಬೆರಳುಗಳನ್ನು ಮಡಚುವುದರಿಂದ ಕರ್ಕಟ(ಕಟಕ)ರಾಶಿಯನ್ನೂ, ಶುಕತುಂಡಹಸ್ತಗಳನ್ನು ಸ್ವಸ್ತಿಕಾಕಾರವಾಗಿರಿಸುವುದರಿಂದ ನಿಂಬೆವೃಕ್ಷವನ್ನು, ಹಸ್ತವನ್ನು ಅಲ್ಲಾಡಿಸುವುದರಿಂದ ಗಿಳಿ (ಶುಕ)ಯನ್ನೂ ಸೂಚಿಸಬಹುದು.







# ನರ್ತನ ಸುರಭಿ

## ಕೃತಿ–ಕೀರ್ತನೆ

▬ **ವೈಷ್ಣವಿ .ಎನ್**

ದೇವರನಾಮಗಳೆಂದರೆ ಯಾರಿಗೆ ತಾನೇ ತಿಳಿದಿಲ್ಲ? ದಾಸವರೇಣ್ಯರಿಂದ ಕರ್ನಾಟಕ ಶಾಸ್ತ್ರೀಯ ಸಂಗೀತ ಮತ್ತು ನೃತ್ಯಗಳಿಗೆ ನೀಡಲ್ಪಟ್ಟ ಈ ಕೊಡುಗೆಗಳು ಸೂರ್ಯ ಚಂದ್ರರಿರುವರೆಗೂ ಅಜರಾಮರ. ಒಂದು ನಿಟ್ಟಿನಲ್ಲಿ ಹೇಳುವುದಾದರೆ ಕನ್ನಡ ಭಾಷೆಯಿಂದ ಸಂಗೀತಕ್ಕೆ ಸಂದ ಅಪೂರ್ವ ರಚನೆಗಳಿವು. ಸಾಮಾನ್ಯ ಜನರಿಗೂ ಅರ್ಥವಾಗುವಂತಹ ಸುಲಭ ಭಾಷಾ ಪ್ರಯೋಗ ಇದರ ಹೆಚ್ಚುಗಾರಿಕೆ. ಇದರ ಸಂಗೀತ, ಮಾತು, ನಡೆ, ಭಾಷೆ, ಧಾತು, ಎಲ್ಲವೂ ಅತಿ ಸರಳ. ಭಕ್ತಿಪ್ರಧಾನ ದೇವತಾ ಸ್ತುತಿ, ಪುರಾಣ ಪ್ರಸಂಗ, ನೀತಿ, ತರ್ಕ, ಆಚಾರ ಸಂಹಿತೆ, ವೇದೋಪನಿಷತ್, ಇತಿಹಾಸ ಪ್ರಾರ್ಥನೆ, ವೈರಾಗ್ಯ, ವರ್ಣನೆ, ತತ್ವ, ಲೌಕಿಕ ಮಹತ್ವ, ಧಾರ್ಮಿಕ–ನೈತಿಕ–ಸಾಮಾಜಿಕ ನಡವಳಿಕೆಗಳು...ಹೀಗೆ ಹತ್ತು ಹಲವು ದಿಸೆಯಲ್ಲಿ ರಚನೆಗೊಂಡ ಭಗವಂತನೆಡೆಗಿನ ನಿಂದಾಸ್ತುತಿ, ನಿವೇದನೆಗಳು ಯಾವುದೇ ಸಂಗೀತ ನೃತ್ಯ ಕಾರ್ಯಕ್ರಮದಲ್ಲಿ ಕಡ್ಡಾಯವೆನಿಸುವಷ್ಟರ ಮಟ್ಟಿಗೆ, ಪ್ರಸಿದ್ಧ..

ಅಷ್ಟಕ್ಕೂ, ದೇವರನಾಮಗಳೆಂದು ಹೆಸರು ಬಂದದ್ದು ಇತ್ತೀಚೆಗಿನ ದಶಕಗಳಲ್ಲಿ. ಅದಕ್ಕಿಂತಲೂ ಹಿಂದೆ ಕೀರ್ತನೆಗಳೆಂದು ಕರೆಸಿಕೊಂಡ ಸ್ತುತಿಗಳಿವು. ಸಂಕೀರ್ತನ ಪದದಿಂದ ಉಗಮವಾಗಿರುವ ಭಕ್ತಿರಸ ಪ್ರಧಾನವಾದ ರಚನೆಗಳನ್ನೇ ನಾವಿಂದು ದೇವರನಾಮಗಳೆಂಬ ಜನಪ್ರಿಯ ಹೆಸರಿನಿಂದ ಕರೆಯುತ್ತೇವೆ. ಊರಿಂದ ಊರಿಗೆ, ಬೀದಿಯಿಂದ ಬೀದಿಗೆ ಭಗವಂತನ ನಾಮಸ್ಮರಣೆ, ಜನರಿಗೆ ಹಿತೋಪದೇಶ ಮಾಡುತ್ತಾ ತಿರುಗುತ್ತಿದ್ದ ಹರಿದಾಸರು ಇವುಗಳನ್ನು ಸಂಕೀರ್ತನೆಗಳೆಂದು ಕರೆದದ್ದು ಔಚಿತ್ಯಪೂರ್ಣ.

ಈ ರಚನೆಗಳು 9 ನೇ ಶತಮಾನದಿಂದ ಹುಟ್ಟಿ, ವಚನಕಾಲವನ್ನೂ ಒಳಗೊಂಡಂತೆ 18ನೇ ಶತಮಾನದುದ್ದಕ್ಕೂ ಬೆಳೆಯುತ್ತವೆ. ಈ ಅಂಶವು ತಾಳ್ಳಪಾಕಂ ಕವಿ, ನಾರಾಯಣತೀರ್ಥ, ಹರಿದಾಸ ಕವಿಗಳ ಗ್ರಂಥಗಳಿಂದ ವೇದ್ಯವಾಗಿದ್ದು, ಸಂಸ್ಕೃತ ಮತ್ತು ಕನ್ನಡ, ತೆಲುಗು, ತಮಿಳು ಭಾಷೆಗಳಲ್ಲೂ ರಚನೆಯಾಗಿವೆ. ಕವಿಕುಂಜರ ಭಾರತಿ, ತಾಂಡವರ್, ಗೋಪಾಲಕೃಷ್ಣ ಭಾರತಿ, ಮಾತೃಭೂತ, ಪಾಪನಾಶಂ ಶಿವನ್, ಘನಂಕೃಷ್ಣ ಅಯ್ಯರ್, ತಿರುವಳ್ಳವರ್, ಕೋಟೀಶ್ವರ ಅಯ್ಯರ್, ರಾಮಲಿಂಗಸ್ವಾಮಿ, ಮಾರಿಮುತ್ತಯ್ಯ ಪಿಳ್ಳೈ ಮುಂತಾದವರು ತಮಿಳು ಕೀರ್ತನಾ ರಚನಾಕಾರರಾದರೆ; ತೆಲುಗಿನಲ್ಲಿ ಶೋಭನಗಿರಿ, ವೇಣಂಗಿ,

ಸಾರಂಗಪಾಣಿ, ಸಭಾಪತಿ ಅಯ್ಯರ್, ಕೈಲಾಸಪತಿ, ಮಲ್ಲಿಕಾರ್ಜುನ ಮುಂತಾದವರು ಪ್ರಮುಖರು. ಆದರೆ ಮುಕ್ಕಾಲು ಭಾಗ ರಚನೆಗಳು ಕನ್ನಡದಲ್ಲೇ ಆಗಿದ್ದು, ನಮ್ಮ ಹೆಮ್ಮೆ.. ಶ್ರೀಪಾದರಾಯ, ಜಗನ್ನಾಥದಾಸ, ಪುರಂದರದಾಸ, ಕನಕದಾಸ, ವ್ಯಾಸರಾಯರು, ಭದ್ರಾಚಲ ರಾಮದಾಸರು, ವಾದಿರಾಜರು, ವಿಜಯವಿಠ್ಠಲದಾಸರು... ದಾಸವರೇಣ್ಯರ ಪಟ್ಟಿ ಮುಂದುವರೆಯುತ್ತದೆ. ಆದರೂ ದಾಸರು ಬರೆದ ಎಷ್ಟೋ ಲಕ್ಷ ಕೀರ್ತನೆಗಳ ಪೈಕಿ ಕೆಲವು ಸಾವಿರದಷ್ಟೇ ಲಭ್ಯವಾಗಿದೆ.ನಮ್ಮ ದೌರ್ಭಾಗ್ಯ.!

ಪಲ್ಲವಿ, ಅನುಪಲ್ಲವಿಯೊಂದಿಗೆ ಚರಣಗಳನ್ನು; ಒಮ್ಮೊಮ್ಮೆ ಒಂಭತ್ತಕ್ಕೂ ಹೆಚ್ಚು ಚರಣಗಳಿರುವ ಇವು, ಅಂಕಿತನಾಮಗಳ ಮೂಲಕ ಮುಕ್ತಾಯವಾಗುತ್ತದೆ. ಉದಾ:– ಪುರಂದರವಿಠ್ಠಲ, ಕಾಗಿನೆಲೆಯಾದಿ ಕೇಶವ. ಮಧ್ಯಮಕಾಲ ಸಾಹಿತ್ಯಕ್ಕೆ ಪ್ರಾಮುಖ್ಯತೆ ಹೆಚ್ಚು. ಕೆಲವು ಕೀರ್ತನೆಗಳಲ್ಲಿ ಜತಿಗಳೂ ಇರುತ್ತವೆ. ಭಕ್ತಿಯ ವಿವಿಧ ಭಾವಗಳ ಅಭಿವ್ಯಕ್ತಿ ಇಲ್ಲಿ ಪೂರ್ಣ ಸಾಧ್ಯ. ಹೀಗೆ..,ಅಭಿನಯಕ್ಕೆ ಹೇರಳವಾದ ಅವಕಾಶವಿರುವುದರಿಂದ ಕಲಾವಿದರು ಅವುಗಳಿಗೆ ಸಂಚಾರೀ ಭಾವ (ಯಾವುದೇ ಒಂದು ಕಥಾ ಅಭಿನಯವನ್ನು ಪಾತ್ರಗಳ ನಿರ್ದಿಷ್ಟ ಅಭಿನಯಿಸುವಿಕೆಯೊಂದಿಗೆ ಸವಿಸ್ತಾರವಾಗಿ ಮಾಡುವುದು) ಅಳವಡಿಸಿಕೊಂಡು, ಪುರಾಣದ ಘಟನೆಗಳನ್ನು ಕಣ್ಣ ಮುಂದೆ ಬಂದು ನಿಲ್ಲುವಂತೆ ನಟಿಸುವುದು ರೂಢಿಯಲ್ಲಿದೆ. ಎಲ್ಲಾ ದೇವರನಾಮಗಳಿಗೂ ಆಯಾಯ ರಚನಾಕಾರರು ಅವರ ಇಚ್ಛೆಯಂತೆ ರಾಗ, ತಾಳ ಸಂಯೋಜನೆ ಮಾಡಿರುವುದಿದೆ. ಆದರೆ ಸಂಗೀತ, ನೃತ್ಯ ಕಲಾವಿದರು ಇತರ ಸಂಗೀತ, ನೃತ್ಯದ ಶಾಸ್ತ್ರೀಯ ರಚನೆಗಳಂತೆಯೇ ಇಂತಹ ನಿರ್ಣಿತ ರಾಗ, ತಾಳಗಳಲ್ಲೇ ಹಾಡಬೇಕು, ನಟಿಸಬೇಕು ಎಂಬ ನಿಬಂಧನೆಗಳಿಲ್ಲ. ಬದಲಾಗಿ ಕಲಾವಿದರು ತಮಗೆ ಸೂಕ್ತವೆನಿಸಿದ ರಾಗಗಳನ್ನು ಬಳಸಿಕೊಳ್ಳಬಹುದು. ಇದು ದೇವರನಾಮ ಸಂಕೀರ್ತನೆಗಳ ವಿಶೇಷ ಮಾತ್ರವಲ್ಲ, ಕಲಾವಿದರಿಗೆ ದಾಸವರೇಣ್ಯರು ಇತ್ತ ಪ್ರೀತಿಪೂರ್ವಕ ಸ್ವಾತಂತ್ರ್ಯ! ಹಾಗಾಗಿ ಈ ದಾಸರಪದಗಳನ್ನು ಲಘುಸಂಗೀತದ ಪ್ರಧಾನ ಅಂಗವಾಗಿ ಪರಿಗಣಿಸಲಾಗುತ್ತಿದೆ., ಉತ್ತರಾದಿ ಸಂಗೀತದಲ್ಲಿ ಬಳಸಲಾಗುತ್ತಿದೆ, ಫ್ಯೂಷನ್‌ಗೆ ಅಳವಡಿಸಲಾಗುತ್ತಿದೆ. ಮಾತ್ರವಲ್ಲ; ಇವುಗಳ ಮುಂದುವರಿದ ಭಾಗಗಳೆನಿಸುವ ಮಟ್ಟಿಗೆ ಭಕ್ತಿಗೀತೆಗಳು ವ್ಯಾಪಕವಾಗಿ ಪ್ರಚಾರ ಪಡೆದಿವೆ.

ಹಾಗಾದರೆ ಸಂಗೀತದ ವಾಗ್ಗೇಯಕಾರರು ಎನಿಸಿಕೊಂಡವರ ರಚನೆಗಳಿಗೆ ಏನನ್ನುತ್ತೇವೆ? ಇದೇ ಅಲ್ಲವೇ ಸಂದೇಹ? ಅವುಗಳೇ ಕೃತಿಗಳು. ಕೃತಿಗಳು ಕೀರ್ತನೆಯ ಪ್ರಾರಂಭದ ನಂತರದ ಕಾಲದಲ್ಲಿ ಹುಟ್ಟಿಕೊಂಡವುಗಳು. ಇವೆರಡರ ಹೆಸರಿನಲ್ಲಿ ಹೋಲಿಕೆಯಿದೆ. ಆದರೆ ಸಾಕಷ್ಟು ವ್ಯತ್ಯಾಸಗಳಿವೆ. ದೇವರನಾಮಗಳು ಕಲಾವಿದರಿಗಿತ್ತ ಪ್ರೀತಿಪೂರ್ವಕ ಸ್ವಾತಂತ್ರ್ಯಗಳು ಇಲ್ಲಿಲ್ಲ. ರಾಗ, ಗತಿ, ತಾಳ, ಶೈಲಿ, ವಿಷಯ ಇವುಗಳಲ್ಲಿ ವಾಗ್ಗೇಯಕಾರನಿಗೆ ಸಂಪೂರ್ಣ ಸ್ವಾತಂತ್ರ್ಯವಿದೆ. ಹಾಗಂದ ಮಾತ್ರಕ್ಕೆ ಕಲಾವಿದನ ಮೇಲೆ ಕಟ್ಟುನಿಟ್ಟಿನ ಹೇರಿಕೆಯೂ ಇಲ್ಲ., ಬದಲಾಗಿ ಇಂತಹವೇ





ರಾಗ, ತಾಳಗಳಿಂದ ಹೀಗೆ,ಹೀಗೆ ಹಾಡಿದರೇ ಚೆನ್ನ ಎಂಬುದು ವಾಗ್ಗೇಯಕಾರರ ನಂಬುಗೆ. ಶುದ್ಧ ಸಂಗೀತಕ್ಕೆ ಕೃತಿ ಒಳ್ಳೆಯ ಉದಾಹರಣೆ.

ಸಂಗೀತ ರಚನೆಗಳಲ್ಲೇ ಅತ್ಯುತ್ತಮ ರಚನಾ ವಿಶೇಷವುಳ್ಳ ಕೃತಿಯ ಮುಖ್ಯಗುಣವೇ ಅದರ ಸಂಗೀತ. ಗಾಂಧರ್ವ ವೇದದಲ್ಲಿ ಸುಸ್ವರ, ಸರಸ, ಸುರಾಗ, ಮಧುರಾಕ್ಷರ, ಅಲಂಕಾರ, ಪ್ರಮಾಣ ಎಂಬ ಕೃತಿಯ 6 ಲಕ್ಷಣಗಳನ್ನು ಹೇಳಲಾಗಿದೆ. ಹಾಗಾಗಿ ಗಾನರಸದ ಅನುಭವವೇ ಗಾಢವಾಗಿರುತ್ತದೆ. ಮಾತಿಗಿಂತ ಧಾತು, ಅಕಾರ–ಉಕಾರ–ಏಕಾರ–ಈಕಾರ ಸಂಗತಿಗಳೇ ಕೃತಿಗಳ ಪ್ರಮುಖ ಸಂಗತಿ. ಪದಗಳು ಕಡಿಮೆ. ಸಾಹಿತ್ಯದ ಮಾಧುರ್ಯ, ಸಂಗೀತದ ಕವಿತ್ವ ಮುಖ್ಯ. ಆ ಮೂಲಕ ಶ್ರೋತೃವಿಗೆ ಕರ್ಣಾನಂದ ಉಂಟು ಮಾಡುವ ಇವು, ರಾಗದ ಪರಿಚಯ, ಸೌಂದರ್ಯ ಹೊರಗೆಡಹುತ್ತದೆ.

ಮನೋಧರ್ಮ ಸಂಗೀತದ ಅಂಗವಾದ ಆಲಾಪನೆ, ನೆರವಲು, ರಾಗ–ತಾನ–ಪಲ್ಲವಿ, ಕಲ್ಪನಾಸ್ವರಗಳನ್ನು ಹಾಡಲು ಹೆಚ್ಚಿನ ಅವಕಾಶ ಇಲ್ಲಿದೆ. ಮುಖ್ಯವಾಗಿ ಸ್ವರ ಸಂಯೋಜನೆಗೆ ಹೆಚ್ಚಿನ ಪ್ರಾಶಸ್ತ್ಯವಿದ್ದು, ಸಂಗತಿಗಳ ಮೂಲಕ ರಾಗವನ್ನು ವಿಸ್ತರಿಸುವ ಅವಕಾಶವನ್ನೂ ಕೊಡುತ್ತದೆ. ಆ ಮೂಲಕ ಸಂಗೀತ, ನೃತ್ಯ ಕಲಾವಿದರ ಪರಿಪಕ್ವತೆ, ಪಾಂಡಿತ್ಯ, ಸಾಮರ್ಥ್ಯ, ಜಾಣ್ಮೆಯನ್ನು ಒರೆಗೆ ಹಚ್ಚುತ್ತದೆ. ಇವು ರಾಗದ ರತ್ನಗಳು. ರಾಗಭಾವದ ವಿವಿಧ ಮುಖಗಳ ನಿರೂಪಣೆ ಇಲ್ಲಿ ಸಾಧ್ಯ. ಹಾಗಾಗಿ ಬಹಳಷ್ಟು ಕೃತಿಗಳು ತಮ್ಮ ರಾಗಗಳ ಮೂಲಕ ಗುರುತಿಸಿಕೊಂಡಿವೆ, ಹಲವು ಬಾರಿ ಕೃತಿಗಳಿಂದಲೇ ಕೆಲವು ರಾಗಗಳು ಪ್ರಸಿದ್ಧಿ ಪಡೆದಿವೆ. ಅಪೂರ್ವ ರಾಗಗಳೂ ಕೃತಿಗಳಿಂದ ತಿಳಿದು ಬರುತ್ತವೆ.

ಪುರಂದರದಾಸರ ಕಾಲದ ವರೆಗೂ ಕೃತಿ ಮತ್ತು ಕೀರ್ತನೆಗಳಿಗೆ ವ್ಯತ್ಯಾಸವಿರಲಿಲ್ಲ. ಪುರಂದರದಾಸರು ಕೀರ್ತನೆ ಎಂಬ ಶಬ್ದವನ್ನು ಪ್ರಪ್ರಥಮವಾಗಿ ಬಳಸಿ ವ್ಯತ್ಯಾಸವನ್ನು ತಿಳಿಸಿದವರು. ಮೊದಲು ಈ ಬಗೆಯ ಕೃತಿಗಳನ್ನು ಕರ್ನಾಟಕದಲ್ಲಿ ರಚನೆ ಮಾಡಿದವರು ನರಹರಿತೀರ್ಥರು. ಸಂಗೀತದ ತ್ರಿಮೂರ್ತಿಗಳೆನಿಸಿದ ತ್ಯಾಗರಾಜ, ಮುತ್ತುಸ್ವಾಮಿ ದೀಕ್ಷಿತರು, ಶ್ಯಾಮಶಾಸ್ತ್ರಿಗಳು ಮುಖ್ಯ ಕೃತಿಕರ್ತೃಗಳು. ಇವರ ನಂತರದಲ್ಲಿ ಮೈಸೂರು ಸದಾಶಿವರಾಯರು, ಪಟ್ಣಂ ಸುಬ್ರಹ್ಮಣ್ಯ ಅಯ್ಯರ್, ಮುತ್ತಯ್ಯ ಭಾಗವತರ್,ಮೈಸೂರು ವಾಸುದೇವಾಚಾರ್, ವೀಣಾಕುಪ್ಪಯ್ಯರ್, ಸ್ವಾತೀ ತಿರುನಾಳ್, ವೀಣೆ ಶೇಷಣ್ಣ,ತಂಜಾವೂರು ಸಹೋದರರು, ಅನ್ನಮಾಚಾರ್ಯರು ಪ್ರಮುಖರು.

ಜಯದೇವ, ಪುರಂದರದಾಸರು, ನಾರಾಯಣತೀರ್ಥರು ಪಲ್ಲವಿ, ಅನುಪಲ್ಲವಿ, ಚರಣಗಳಿರುವ ರಚನೆಗಳನ್ನು ಮಾಡಿದ್ದರು. ಆದರೆ ಕಾಲಾಂತರದಲ್ಲಿ ಕೃತಿಯ ಸಂಪೂರ್ಣ ಸ್ವರೂಪವನ್ನು ವಿಕಾಸಗೊಳಿಸಿ ಸಂಗತಿಗಳನ್ನು ಅಳವಡಿಸಿ, ನಿರ್ದಿಷ್ಟ ಸ್ವರೂಪವನ್ನು ಕೊಟ್ಟವರು ತ್ಯಾಗರಾಜರು. ಆದರೆ ತ್ಯಾಗರಾಜರಿಗಿಂತ ಹಿಂದಿನ ತಲೆಮಾರಿನ ಶ್ರೀಶೇಷಯ್ಯಂಗಾರ್, ಶ್ರೀನಿವಾಸ, ಘನಂಶೀನಯ್ಯ ಕೃತಿಯ ಪ್ರವರ್ತಕರು

ಎನ್ನುತ್ತಾರೆ ಸುಬ್ಬರಾಮ ದೀಕ್ಷಿತರು.. ಇವರೊಂದಿಗೆ ಪಲ್ಲವಿ ಗೋಪಾಲಯ್ಯರ್, ತ್ಯಾಗರಾಜರ ತಾತ ಗಿರಿರಾಜ ಕವಿಗಳೂ ಕೃತಿ ಇತಿಹಾಸದ ಪ್ರಾಚೀನರು.

ಕೃತಿಗಳಲ್ಲಿ ಅನೇಕ ಬಗೆಗಳಿವೆ. ನವಗ್ರಹ ಕೃತಿ, ಪಂಚರತ್ನ ಕೃತಿ, ನವರಾತ್ರಿ ಕೃತಿ, ನವಾವರಣ ಕೃತಿ, ನವರತ್ನ ಮಾಲಿಕಾ ಕೃತಿ, ಉತ್ಸವ ಸಂಪ್ರದಾಯ ಕೃತಿ..ಹೀಗೆ. ವಾಗ್ಗೇಯಕಾರರು ತಮ್ಮ ಇಷ್ಟದೇವರ ಅಂಕಿತದಲ್ಲಿ ಇಂತಹ ಕೃತಿಗಳನ್ನು ರಚಿಸಿದ್ದಾರೆ. ಕೆಲವು ಕೃತಿಗಳಲ್ಲಿ ಚರಣಗಳು ಅನುಪಲ್ಲವಿಯಂತೆಯೇ ಇರುತ್ತದೆ. ಆದರೆ ಮುತ್ತುಸ್ವಾಮಿ ದೀಕ್ಷಿತರ ಕೃತಿಗಳಲ್ಲಿ ಇಂತಹ ಧಾತು ಪುನರಾವರ್ತನೆಯಾಗುವುದಿಲ್ಲ. ಇವರ ಹಲವು ಕೃತಿಗಳಲ್ಲಿ ಪಲ್ಲವಿ, ಅನುಪಲ್ಲವಿ ಮಾತ್ರ ಇರುತ್ತದೆ. ಇಂತಹ ಕೃತಿಗಳ ಅನುಪಲ್ಲವಿಗೆ ಸಮಷ್ಠಿ ಚರಣವೆಂದು ಹೆಸರು. ಇಂತಹ ಪಲ್ಲವಿ ಮತ್ತು ಸಮಷ್ಠಿ ಚರಣಗಳು ಪ್ರಾಸಬದ್ಧವಾಗಿದ್ದು, ಕೃತಿಯ ಸೌಂದರ್ಯ ಹೆಚ್ಚಿಸಲು ಸಮಕಾಲ, ಮಧ್ಯಮಕಾಲದ, ವಿಲೋಮ ಅಥವಾ ಅನುಲೋಮ ಚಿಟ್ಟೆಸ್ವರಗಳನ್ನು ಸೇರಿಸಿರುತ್ತಾರೆ. ಕೆಲವಲ್ಲಿ ಮಧ್ಯಮ ಕಾಲ ಸಾಹಿತ್ಯ, ಸೊಲ್ಕಟ್ಟುಸ್ವರ, ಸ್ವರ ಸಾಹಿತ್ಯವೂ ಇರುತ್ತದೆ. ಕೆಲವು ಕೃತಿಗಳೂ ಘಟನೆಗಳನ್ನು ಹೊಂದಿರುತ್ತವೆ. ಇವೆಲ್ಲವೂ ಕೃತಿಯನ್ನು ಮಾಧುರ್ಯ ಮತ್ತು ಗಾಂಭೀರ್ಯಪೂರ್ಣವನ್ನಾಗಿಸುತ್ತದೆ.

ಪ್ರತಿಭಾವಂತರು ಭಕ್ತಿಪರವಶ, ತನ್ಮಯರಾಗಿ ಹಾಡಿದರಷ್ಟೇ ಇಂತಹ ಸಂಕೀರ್ತನಗಳಿಗೆ, ಕೃತಿಗಳಿಗೆ ಇದಕ್ಕೆ ಮತ್ತಷ್ಟು ಸೌಂದರ್ಯ, ಅರ್ಥ ನೀಡಬಲ್ಲರು. ಆದರೆ ಇಂದು ಹಲವು ಕಾರ್ಯಕ್ರಮ, ಸ್ಪರ್ಧೆಗಳಲ್ಲೂ ಕೃತಿ, ಕೀರ್ತನೆ, ಭಕ್ತಿಗೀತೆಗಳ ವ್ಯತ್ಯಾಸ ತಿಳಿಯದೆ ಇರುವ ಸಾಹಿತ್ಯವನ್ನೂ ಕೆಡಿಸಿ, ತಮ್ಮ ಸ್ವಂತ ಸಾಹಿತ್ಯವನ್ನೂ ಸೇರಿಸಿ, ಅಲ್ಪಪ್ರಾಣ, ಮಹಾಪ್ರಾಣದ ಪ್ರಾನ ತೆಗೆದು, ಭಾಷೆ-ಪದಗಳ ಅರ್ಥ ತಿಳಿಯಲೇ ಹೋಗದೆ, ಅರಚುವುದನ್ನು, ಆಡುವುದನ್ನು ಕೇಳಿದಾಗ, ವೀಕ್ಷಿಸಿದಾಗ ಇದು ಆಧುನಿಕ ಮನೋಭಾವದ ಶಾಪವೋ, ಅಥವಾ ವರವೋ ಅರ್ಥವಾಗದಂತಹ ಸ್ಥಿತಿ. ಮೂಲ ಸೌಂದರ್ಯವನ್ನೇ ಕೆಡಿಸುವ ಮಟ್ಟಿಗೆ ಸಿನಿಮಾವನ್ನೂ ಒಳಗೊಂಡಂತೆ ವಿಭಿನ್ನ ನೆಲೆಯಲ್ಲಿ ಕೀರ್ತನೆ, ಕೃತಿಗಳನ್ನು ಬಳಸುವ ವೈಖರಿಯು ಪರಂಪರೆಯನ್ನು ಪ್ರತಿನಿಧಿಸುವುದಿಲ್ಲ ಎಂಬುದು ನಿಜ; ಆದರೆ ಇವೆಲ್ಲಾ ಕಲಾವಿದರು ತಮ್ಮ ಅನುಭವ, ಜ್ಞಾನವನ್ನು ಎಷ್ಟರ ಮಟ್ಟಿಗೆ ವಿಸ್ತರಿಸುತ್ತಾರೆ ಎಂಬುದರ ಸೂಚಕವಂತೂ ಹೌದು!







## ಲಲಿತ ಲಹರಿ

ನರ್ತಕಿ ಬಂದಳು ಘಲ್‌ಘುಲ್ ನಾದದಿ
ಠಮ ಢಮ ತಾಳಕೆ ಕುಣಿಯುತ್ತ
ಪಾತರಗಿತ್ತಿಯ ಆ ಕುಣಿತ
ಪಾರ್ಥ ಸುಭದ್ರೆಯ ರಾಧಾಕೃಷ್ಣರ-
ನೊಬ್ಬಳೆ ತಾನೆಂದೆಣಿಸುತ್ತ
ರಂಗಸ್ಥಳದಲಿ ತಿರುಗುತ್ತ



ತುಟಿಯಿಂದುರುಳುವ ಹಾಡಿನ ತನಿರಸ
ಮೌಕ್ತಿಕ ಮಣಿಯಂತುರುಳುವುದು ;
ತಾಳದ ಓಜೆಗೆ ಜಾರುವುದು !
ಕತ್ತಲೆ ನಡುವಣ ಚಂದ್ರನ ಬಿಂಬವೊ
ಕೆದರಿದ ಹೆರಳದು ಇಕ್ಕಡೆಯು
ಸುಂದರ ಮುಖವೊ ಮಿನುಗೆಲೆಯು.
ಕಣ್ಣಾಲಿಗಳನು ಹೊರಳಿಸಿ ಉರುಳಿಸಿ
ದುಂಡನೆ ರುಂಡವನಲುಗಾಡಿ ;
ಕಣ್ಣನು ಮೂಗಿನ ಮೇಲಿರಿಸಿ
ಕುಣುಕುಣು ಮೊಣಕಾಲಾಟದಿ ನೋಟದಿ
ಕೊಂಕಿಸಿ ನಡುವನು ಆ ಮಳ್ಳಿ
ಚಂಚಲ ಮಿಂಚಿನ ಬಾನ್‌ಬಳ್ಳಿ !
ಫಾರಸಿ ಹಿಂದೀ ವಂಗೀಯ ಕಲೆ
ಒಂದಾಯಿತು ಇಂದೀ ಮೇಳ !
ಬೃಂದಾವನದ ಆ ಲೀಲಾ !
ಬಂದಳು ನರ್ತಕಿ ಕೈಗಳ ಬೀಸುತ
ಮೆಟ್ಟುತ ಬೆಟ್ಟಲಿ ಆ ಕುಣಿತ
ಓಹೋ ಓಹೋ ಕನ್ನಡ ಗಾನ
'ಕಥಕಳಿ'ಯಾಟದ ಬಯಲಾಟ
ಭರತನ ನಾಟ್ಯದ ಮನನೋಟ
ಲಾಸ್ಯನರ್ತನ ನಟಕೇಸರಿ ಮನ
ಜುಂ ಜುಂ ಘಲ್ ಚಲ್ ಈ ಓಜ
ನರ್ತನ ತೋರಿದ ನಟರಾಜ.



ಹೊರಳುವ ಅಂಗಗಳಾಟವ ನೋಡಿರೊ
ಬೆರಳನು ತೋರುವ ತಿರುಳನ್ನು
ಕೊಂಕಿಸಿ ಕಾಲಿನ ನಿಲುವನ್ನು !
ದುಂಡನೆ ತಲೆಯನಲುಗಿಸಿ ತೋರುವ
ಮನ್ಮಥ ಕರೆಯೊ ಅದು ಕೇಳೊ !
ಚಕ ಚಕ ಎದೆಯ ಗೆಲುನೋಡೊ.

ಬಗ್ಗಿದಳೆದ್ದಳು ಹಾರಿದಳೋಡಿದ-
ಳೆಂತೀ ಆಟದ ಈ ಬಲ್ಮೆ
ಕುಲುಕಿತ ಅಂಗಗಳೇ ನಲ್ಮೆ.
ಊರ್ವಶಿ ರಂಭೆಯರಾದಿನದಾಟವ
ತೋರುತ ನರ್ತಕಿ ಬಂದಳದೊ,
ಕುಡಿನೋಟಾಡಿಸಿ ಕುಣಿವಳದೊ !

ಗಿರಿಗಿಟಿ ತಿರುಗಿದ ತೆರದಲಿ ತಿರುಗಿತು,
ಥಕಥಕ ಧೀಂಕಿಟ ಹಾರಿದಳು
ಗಾಳಿಯ ನರ್ತನ ತೋರಿದಳು.
ವಾನರ ಚೇಷ್ಟಾ ಗೋಷ್ಠಿಯಲಿರಿತಳು
ಹಿಂದೂ ಮುಂದೂ ಜೋಲಾಡಿ
ತನಗೇ ತಾನೇ ತೂಗಾಡಿ.

ಸೂರ್ಯನ ಕಾಂತಿಯ ನೋಡುತ ಭ್ರಾಂತಿಯಿಂ
ಥೈ ಥೈ ಹಾರಿತು- ಆ ರಭಸ
ಲೇ ಲೇ ತಟ್ಟುವ ಪನ್ಯಾಸ !
ಢಮರುಗ ಬಾರಿಸಿ ಲೋಕವ ತಿರುಗಿಸಿ
ನರ್ತನ ತೋರಿದ ಪರಮೇಶ
ಬಂದಳು ನರ್ತಕಿ- ಆ ವೇಷ !



**(ಶ್ರೀಯುತ ಐ. ಮಾ. ಮುತ್ತಣ್ಣ ಅವರ 'ಮುತ್ತಣ್ಣನ ಕವನಗಳು' ಕವನ ಸಂಕಲನದಿಂದಾಯ್ದ ಕವನಲಹರಿ- 'ನರ್ತಕಿ ಬಂದಳು')**





ಗೀತ-ನೃತ್ಯ-ನಾಟಕಗಳ ಸಾಂಗತ್ಯ : ಗೀತನಾಟಕ

# ಗೀತ-ನೃತ್ಯ-ನಾಟಕಗಳ ಸಾಂಗತ್ಯ : ಗೀತನಾಟಕ

**— 'ವಿಪ್ರಭಾ'**

ಕನ್ನಡ ಸಾಹಿತ್ಯ ಲೋಕಕ್ಕೆ ಒಳ್ಳೆಯ ನೆನಪುಗಳನ್ನಿತ್ತ ಹಲವು ಸಾಹಿತಿಗಳು ನೃತ್ಯ ರಂಗಭೂಮಿಗೂ ಮರೆಯಲಾರದ ಕೊಡುಗೆಗಳನಿತ್ತಿದ್ದಾರೆ. ಅಚ್ಚುಕಟ್ಟಾದ ಲಯವುಳ್ಳ ಸ್ವರ, ಸಾಹಿತ್ಯಗಳ ರಚನೆಗಳು ನೃತ್ಯರೂಪಕ-ನಾಟಕಗಳನ್ನು ಅಭಿನಯಿಸುವ ಕಲಾವಿದರಿಗೆ ನಿಜಕ್ಕೂ ನಿಧಿಯಿದ್ದಂತೆ! ಇದರಿಂದ ಸಂಗೀತ, ನೃತ್ಯ ಮತ್ತು ಹಿನ್ನಲೆ ಕಲಾವಿದರು ನೃತ್ಯದ ವ್ಯಾಪ್ತಿಯನ್ನು ಎಷ್ಟರ ಮಟ್ಟಿಗೆ ವಿಸ್ತರಿಸಬಲ್ಲರು ಎಂಬುದನ್ನು ಪರಿಣಾಮಕಾರಿಯಾಗಿ ಕಂಡುಕೊಳ್ಳಬಹುದು. ಅಂತಹ ಅವಿಸ್ಮರಣೀಯ ಕೊಡುಗೆ ನೀಡಿದ ಸಾಹಿತಿಗಳ ಪೈಕಿ ಮೊದಲ ಪಂಕ್ತಿ ದಿವಂಗತ ಪು.ತಿ.ನರಸಿಂಹಾಚಾರ್ ಅವರದ್ದು!

ಪು.ತಿ.ನ ಅವರ ಅಹಲ್ಯೆ, ಗೋಕುಲ ನಿರ್ಗಮನ ಕೃತಿಗಳೆಲ್ಲಾ ನವೀನ ನೃತ್ಯ ಆವಿಷ್ಕಾರಕ್ಕೆ ತೆರೆದುಕೊಂಡವುಗಳು. ಬಿ. ವಿ. ಕಾರಂತರು ಗೋಕುಲ ನಿರ್ಗಮನಕ್ಕೆ ನೀಡಿದ ಸಂಗೀತ ಸ್ಪರ್ಶ ಫ್ಯೂಷನ್‌ಗೆ ಉತ್ತಮ ಉದಾಹರಣೆ. ಗೋಕುಲ ನಿರ್ಗಮನದ ಸಂಗೀತ ನೃತ್ಯ ಸಾಧ್ಯತೆಗಳು ಸೃಜನಶೀಲ ವಾತಾವರಣವನ್ನೇ ನಿರ್ಮಿಸಿತ್ತು. ಇಂತಹ ನೃತ್ಯನಾಟಕಗಳ ಮತ್ತೊಂದು ಸಂಕಲನ 'ಹಂಸ ದಮಯಂತಿ ಮತ್ತು ಇತರ ಗೀತನಾಟಕಗಳು'. ಪು.ತಿ.ನ ಅವರ ಲೇಖನಿಯಿಂದ ಹರಿದುಬಂದ ಹರಿಣಾಭಿಸರಣ, ವಸಂತಚಂದನ, ವರ್ಷ-ಹರ್ಷ, ಶರದ್ವಿಲಾಸ, ದೀಪಲಕ್ಷ್ಮಿ, ರಾಮೋದಯಂ, ಸೀತಾಪರಿಣಯ ಮುಂತಾದ ಗೀತನಾಟಕಗಳು ನೃತ್ಯಮಾಧ್ಯಮದ ಒಂದು ಆಸ್ತಿಯೇ ಸರಿ!

'ಒಂದು ಹಾಡನ್ನು ಮಾಡುವ ಮೊದಲು ಸಂಗೀತದ ಮಟ್ಟನ್ನು ಮನಸ್ಸಿನಲ್ಲಿ ನಿಶ್ಚಯಿಸಿಕೊಂಡು ಅನಂತರ ಅದಕ್ಕೆ ಹೊಂದುವ ಸಾಹಿತ್ಯವನ್ನು ಕಲ್ಪಿಸುತ್ತೇನೆ. ಆದ್ದರಿಂದಲೇ ಕೇವಲ ಸಾಹಿತ್ಯಕೃತಿಯಾಗಿ ಮಾತ್ರವಲ್ಲ, ಸಂಗೀತ ಕೃತಿಯಾಗಿಯೂ ಉಳಿದುಕೊಳ್ಳುತ್ತದೆ.' ಎನ್ನುವುದು ಪು.ತಿ.ನ ಅವರ ಅನುಭವಜನ್ಯ ಮಾತು. ಧಾತು ಮತ್ತು ಮಾತುಗಳ ಪರಸ್ಪರ ಕೂಡುವಿಕೆಯು ಗೀತಗಳ ಸೃಷ್ಟಿಗೆ ಒಳ್ಳೆಯ ವೇಗ ಮತ್ತು ಓಘ ಕೊಡಬಹುದು ಎನ್ನುವುದನ್ನು ಇಲ್ಲಿ ಕಾಣಬಹುದು.

ಗೀತಗಳ ರಚನೆಯಲ್ಲಿ ಇಷ್ಟು ಮಾತ್ರವಲ್ಲ, ಮತ್ತಷ್ಟು ಹೊಸತಿನ ಸೃಷ್ಟಿಗೆ ಕಾರಣರಾಗಿದ್ದಾರೆ ಪು.ತಿ.ನ ! ಇವರ ಸ್ವತಂತ್ರವಾದ ಕಲ್ಪನಾಪ್ರವಾಹಕ್ಕೆ ಸಾಕ್ಷಿಯೇ

ವಾಸಂತಿ, ಗಾಂಧಾರಲೋಲ, ಋಷಭವಿಲಾಸ, ಸಂಜೀವಿನಿ, ಹರಿಣಿ ಮುಂತಾದ ಅವರೇ ಕಂಡುಹಿಡಿದ ನೂತನ ರಾಗಗಳು! ಋತುವಿಲಾಸದಂತಹ ಹಿಂದೂಸ್ತಾನೀ ರಾಗಗಳು, ಜೊತೆಗೆ ಅಪೂರ್ವವೆನಿಸುವ ರಾಗಗಳು, ಜನಪ್ರಿಯ ರಾಗಗಳನ್ನೂ ಸೇರಿಸಿದಂತೆ ಒಟ್ಟು ೭೬ ರಾಗಗಳನ್ನು ಬಳಸಿದ್ದಾರೆ. ಗೀತ ನಾಟಕಗಳೆಲ್ಲಾ ಸ್ವರಸಹಿತ ರಾಗ, ತಾಳಬದ್ಧವಾಗಿದ್ದು ಕೇವಲ ಶಾಸ್ತ್ರೀಯ ಧಾಟಿಯಲ್ಲಷ್ಟೇ ಅಲ್ಲದೆ, ವೃಂದಗಾನ, ಲಘುಗೀತ, ಸುಗಮಸಂಗೀತ, ಜಾನಪದ..ಹೀಗೆ ಸಂಗೀತದ ಪ್ರತೀ ಪ್ರಕಾರಕ್ಕೆ ಪೂರಕವಾಗುವ ಧಾಟಿಗಳ ಮಿಶ್ರಣವೂ ಇದೆ! ಹಾಗಾಗಿ ಈ ಗೀತನಾಟಕಗಳು ಶಾಸ್ತ್ರೋಚಿತ ಎನಿಸಿಕೊಂಡಿವೆ, ಜೊತೆಗೆ ಸೃಜನಶೀಲವೂ ಕೂಡಾ !

ಹೊಸತು, ಹಳತಿನ ಸಂಘರ್ಷದ ಸಂಧಿಕಾಲದ ಮನೋಧರ್ಮವನ್ನು ಚೆನ್ನಾಗಿ ಅರಿತುಕೊಂಡವರು ಪು.ತಿ.ನ. ಹಾಗಾಗಿ, ಸಾಂಪ್ರದಾಯಿಕ ಸ್ವರಗಳಿಗೆ ಹೊಸ ಭಾವವನ್ನೂ, ಹಳೆಯ ಶಬ್ದಗಳಿಗೆ ಹೊಸ ಅರ್ಥವನ್ನೂ ನೀಡಿದ್ದಾರೆ. ಜೊತೆಗೆ ಹೊಸ ದಾರಿಯ ನಡಿಗೆಗೆ ಹಳೆಯ ಸಂಪ್ರದಾಯವನ್ನೂ ಒಗ್ಗಿಸಿಕೊಂಡಿದ್ದಾರೆ. ಆದ್ದರಿಂದಲೇ ಇಲ್ಲಿನ ರಸಾನುಭವ ಅಗ್ಗವೆನಿಸಿಲ್ಲ.,ಕುಗ್ಗಿಲ್ಲ!





ಹರಿಣಾಭಿಸರಣಕ್ಕೆ ಆರ್.ಕೆ. ಶ್ರೀಕಂಠನ್, ವಸಂತಚಂದನಕ್ಕೆ ಎ. ವಿ. ಕೃಷ್ಣಮಾಚಾರ್ಯರು ಮತ್ತು ಅವರ ತಂಡ...ಹೀಗೆ, ವಿವಿಧ ವಿದ್ವಾಂಸರು ಇಲ್ಲಿನ ಗೀತನಾಟಕಗಳಿಗೆ ಸ್ವರ ನಿರ್ದೇಶನವನ್ನೂ ಮಾಡಿ, ಆಗಿನ ಕಾಲದಲ್ಲೇ ಆಕಾಶವಾಣಿಯಲ್ಲಿ ಪ್ರಸ್ತುತಪಡಿಸಿದ್ದಾರೆ. ನೀನಾಸಂ, ರಂಗಾಯಣವು ಗೋಕುಲ ನಿರ್ಗಮನದಂತಹ ಪ್ರದರ್ಶನಗಳಿಂದ ಇಂದಿಗೂ ಅದರ ಭವ್ಯ ಸಾಧ್ಯತೆಗಳನ್ನು ತೋರಿಸಿಕೊಡುತ್ತಿದ್ದಾರೆ. ಅಂತೆಯೇ ಹಲವು ನೃತ್ಯ ನಿರ್ದೇಶಕರು ಈ ಗೀತನಾಟಕಗಳ ಕುರಿತಂತೆ ತಮ್ಮ ಕಲ್ಪನೆಯನ್ನು ಪ್ರದರ್ಶನಗಳಲ್ಲಿ ಮತ್ತಷ್ಟು ಸಾಕ್ಷೀಕರಿಸುತ್ತಿದ್ದಾರೆ.

'ಗೀತಗಳ ಸೃಷ್ಟಿಯಲ್ಲಿ ಗಾಂಭೀರ್ಯವಿದೆ, ಬಿಗಿಯಿದೆ, ಕುಶಲತೆಯಿದೆ, ಕಲಾಪರಿಪೂರ್ಣತೆಯಿದೆ, ಯಾವುದೇ ಗೀತರೂಪಕವನ್ನು ತೆಗೆದುಕೊಂಡರೂ ಆರಂಭದಿಂದ ಅಂತ್ಯದ ವರೆಗೂ ಶ್ರೋತೃಗಳ ಮನಸ್ಸನ್ನು ಸೆರೆಹಿಡಿದು ನಿಲ್ಲಿಸುತ್ತದೆ. ಕಾರಣ, ಗೀತಗಳಲ್ಲಿರುವ ವೈವಿಧ್ಯ. ಯಾವ ಹಾಡಿನಲ್ಲಿಯೂ ಅನುಕರಣವಿಲ್ಲ. ಒಂದೊಂದೂ ಸ್ವತಂತ್ರ ಕಲ್ಪನೆಯಿಂದ ಮೂರ್ತಿವೆತ್ತ ರಚನೆ'. ಹೀಗಂದವರು ವಿ. ದೊರೆಸ್ವಾಮಿ ಅಯ್ಯಂಗಾರ್., ನೃತ್ಯ ನಾಟಕಗಳ ಮತ್ತೋರ್ವ ಸಂಗೀತ ಸಂಯೋಜಕರು !









**...ಜ**ನರು ಬರೀ ಜನಪ್ರಿಯ ಮಾದರಿಗಳ ಬೆನ್ನು ಮಾತ್ರ ಹತ್ತಿ ಹೋಗುತ್ತಾರೆ- ಎಂಬ ಮಾತು ಬರೀ ಸುಳ್ಳು. ...ಏನಂತೀರಿ?
ಭ್ರಮರಿಯ ವಾರ್ಷಿಕ ಸಂಭ್ರಮಕ್ಕೆ ಶುಭ ಹಾರೈಕೆಗಳು.

***-ಹರೀಶ್ ಟಿ.ಜಿ.,ಉಪನ್ಯಾಸಕರು,ಮೂಡಬಿದಿರೆ.***

ನೂಪುರ ಭ್ರಮರಿಯಂತಹ ವೈಶಿಷ್ಟ್ಯಪೂರ್ಣ ಸಂಚಿಕೆಯನ್ನು ಹೊರತಂದಿರುವುದೇ ದೊಡ್ಡ ಸಾಹಸ. ಅದಕ್ಕಾಗಿ ಸಂಪೂರ್ಣ ತೊಡಗಿಸಿಕೊಂಡಂತಹ ನಿಮ್ಮಂತವರಿಂದ ಮಾತ್ರ ಈ ಕೆಲಸ ಸಾಧ್ಯ. ಅದಕ್ಕಾಗಿ ವಾರ್ಷಿಕ ಸಂಭ್ರಮದ ಶುಭಾವಸರದಲ್ಲಿ ಅಭಿನಂದಿಸುತ್ತೇನೆ. ವರ್ಷ ತುಂಬಿದ ಶುಭ ಸಂದರ್ಭದಲ್ಲಿ ವಿಶೇಷ ಸಂಚಿಕೆಯನ್ನು ಹೊರ ತಂದಿರುವುದರೊಂದಿಗೆ ಪತ್ರಿಕೆಯ ವೆಬ್ ಸೈಟ್ ಒದಗಿಸಿರುವುದು ಸಂದರ್ಭೋಚಿತ. ನಿಮ್ಮ ಮಹತ್ಸಾಧನೆಗೆ ಭಗವಂತನು ಹಾಗೂ ಸಹೃದಯರು ಎಲ್ಲಾ ರಿತಿಯ ನೆರವು ನೀಡಲೆಂದು ಹಾರೈಸುತ್ತೇನೆ.

***-ಪ್ರೊ। ಎಸ್. ಪ್ರಭಾಕರ್, ಉಪಾಧ್ಯಕ್ಷರು,***
***ಶ್ರೀ ಧರ್ಮಸ್ಥಳ ಮಂಜುನಾಥೇಶ್ವರ ಎಜುಕೇಶನಲ್ ಸೊಸೈಟಿ, ಉಜಿರೆ.***

ಮಡಿಕೇರಿಯಂತಹ ಗುಡ್ಡಗಾಡು ಪ್ರದೇಶದಲ್ಲಿದ್ದು ತಾವು ನಡೆಸುವ ಕಲಾಸೇವೆ, ಸಾಹಸ ನಿಜವಾಗಿಯೂ ಸ್ತುತ್ಯಾರ್ಹ. ವಾರ್ಷಿಕ ಸಂಭ್ರಮಕ್ಕೆ ಶುಭವನ್ನಷ್ಟೇ ಅಲ್ಲದೆ, ಇನ್ನೂ ಉತ್ತರೋತ್ತರ ಅಭಿವೃದ್ಧಿ ಹೊಂದಲಿ ಎಂದು ಆಶಿಸುತ್ತೇವೆ.




***-ಬಿ. ದೀಪಕ್ ಕುಮಾರ್, ನೃತ್ಯ ನಿರ್ದೇಶಕರು,***
***ಶ್ರೀ ಮೂಕಾಂಬಿಕಾ ಕಲ್ಚರಲ್ ಅಕಾಡೆಮಿ, ಪುತ್ತೂರು.***


ಮಡಿಕೇರಿಯಲ್ಲಿ ಒಂದು ಸಾಂಸ್ಕೃತಿಕ ಪತ್ರಿಕೆಯನ್ನು ಆರಂಭಿಸಿ ಸ್ಥಳೀಯ ಇತಿಹಾಸದಲ್ಲೂ ಹೊಸ ಬೆಳವಣಿಗೆಯನ್ನು ದಾಖಲಿಸುವ ನಿಮ್ಮ ಪ್ರಯತ್ನವು ನಿಜಕ್ಕೂ ಅಭಿನಂದನೀಯ. ಕಲಿತ ವಿದ್ಯೆಯನ್ನು ಬದುಕಿಗಾಗಿ ಉಪಯೋಗಿಸುವವರು ಕೆಲವರಾದರೆ, ಅದನ್ನು ಸೃಜನಾತ್ಮಕವಾಗಿ ವಿಸ್ತರಿಸುವವರು ಕೆಲವೇ ಕೆಲವರು. ಅಂತಹ ನಿಮ್ಮ ಅಪೂರ್ವ ಸಾಧನೆಗೆ ಪೂರ್ಣ ಯಶಸ್ಸು ಸಿಗಲೆಂದು ಹಾರೈಸುತ್ತೇನೆ.

***-ಡಾ। ಚಂದ್ರಶೇಖರ ದಾಮ್ಲೆ, ಅಧ್ಯಕ್ಷರು, ಸ್ನೇಹ ಶಿಕ್ಷಣ ಸಂಸ್ಥೆ, ಸುಳ್ಯ.***

ನಿಮ್ಮ ಕಾರ್ಯ ನಿಷ್ಟೆಗೆ ಮತ್ತು ಉತ್ಸಾಹಕ್ಕೆ ಅಭಿನಂದನೆಗಳು. ನಿಜಕ್ಕೂ ನಿಮ್ಮ ಪ್ರಯತ್ನ ಕಂಡರೆ ತುಂಬಾ ಖುಷಿಯಾಗುತ್ತದೆ.

***–ಶ್ರೀಶ ಕಾರಂತ, ಬೆಂಗಳೂರು.***

ಅಭಿನಂದಿಸಲೇಬೇಕಾದದ್ದು! ಭ್ರಮರಿಯ ಮೂಲಕ ಪ್ರಯತ್ನದಲ್ಲಿ ಯಶಸ್ಸು ಕಾಣುತ್ತಿರುವ ನಿಮ್ಮ ಬಳಗವನ್ನು ಕಂಡು ತುಂಬಾ ಸಂತೋಷವಾಗುತ್ತಿದೆ. ಮತ್ತಷ್ಟು ಹೊಸತನ್ನು ನಿಯತಕಾಲಿಕೆಗ[illegible] ವೆಬ್‌ಸೈಟ್ ನಿಜಕ್ಕೂ ಅದ್ಭುತ ಪ್ರಯತ್ನ. ಸಿಂಪ್ಲೀ ಗ್ರೇಟ್ !




***–ಅನಘಶ್ರೀ, ಯುಎಸ್‌ಎ.***

ನಿಮ್ಮ ಒಳ್ಳೆಯ ದೃಷ್ಟಿಕೋನವನ್ನು ವೆಬ್‌ಸೈಟ್‌ನ ನಿರೂಪಣೆಯಲ್ಲೇ ಗಮನಿಸಬಹುದು. ಚೆನ್ನಾಗಿ ಮೂಡಿಬಂದಿದೆ. ಉತ್ತಮ ಕೆಲಸ ನಡೆಯುತ್ತಿದೆ. ಬಹಳಷ್ಟು ಮಂದಿಯನ್ನು ಆಕರ್ಷಿಸುವುದರಲ್ಲಿ ಸಂಶಯವಿಲ್ಲ. ಗುಡ್ ಲಕ್.

***–ವೀಣಾ ಡಿಸೋಜಾ, ಸಾರ್ವಜನಿಕ ಸಂಪರ್ಕಾಧಿಕಾರಿ, ಬೆಂಗಳೂರು.***

ಇಷ್ಟೊಂದು ಕಡಿಮೆ ಅವಧಿಯಲ್ಲೇ ತನ್ನಿಂದಾದಷ್ಟೂ ಪ್ರಬುದ್ಧತೆಯನ್ನೂ, ಪೂರ್ಣತೆಯನ್ನೂ ಸಾಧಿಸಿರುವುದು ಮತ್ತು ಸಹೃದಯರನ್ನು ಸೆಳೆಯುತ್ತಿರುವುದು ನಿಜಕ್ಕೂ ಪ್ರಶಂಸನೀಯ. ಆದರೂ ಮತ್ತಷ್ಟು ಪ್ರಚಾರವನ್ನು ಪತ್ರಿಕೆಗೆ ಕೊಟ್ಟಲ್ಲಿ ಬದುಕಿನ ಬಹು ಸ್ತರದ ಜನರನ್ನು ತಲುಪಲು ಸಾಧ್ಯ.

***–ಕಿಗ್ಗಾಲು ಗಿರೀಶ್, ಬರಹಗಾರರು, ಕೊಡಗು.***

ನಿಮ್ಮ ಪ್ರಯತ್ನಕ್ಕೆ ಹ್ಯಾಟ್ಸ್ ಅಪ್. ಆದರೆ ವೆಬ್‌ಸೈಟ್‌ನ್ನು ಯೂನಿಕೋಡ್ ವರ್ಶನ್‌ನಲ್ಲಿ ಬದಲಾಯಿಸಿದಲ್ಲಿ,ವೆಬ್‌ಸೈಟ್‌ನ ಓದಿಗಾಗಿ ಅದಕ್ಕೆ ಸಂಬಂಧಿಸಿದ ಅಕ್ಷರಗಳ ಸಾಫ್ಟ್‌ವೇರ್‌ಗಳನ್ನು ಇನ್‌ಸ್ಟಾಲ್ ಮಾಡಿಕೊಳ್ಳುವುದೂ ತಪ್ಪುತ್ತದೆ.

***–ಅವಿನಾಶ್, ಚೆನ್ನೈ.***

(ನಿಮ್ಮ ಅಭಿಪ್ರಾಯ ನಿಜ ಮತ್ತು ಸ್ವಾಗತಾರ್ಹವೂ ಕೂಡಾ! ಈ ದಿಸೆಯಲ್ಲಿ ಚಿಂತನೆ ಇದೆ. ಆದರೆ ಯೂನಿಕೋಡ್‌ನ ಅಕ್ಷರ ವಿನ್ಯಾಸ ಅಷ್ಟೊಂದು ವೈವಿಧ್ಯ ಮತ್ತು ಉತ್ತಮವಾಗಿಲ್ಲ ಎನ್ನುವ ಕಾರಣಕ್ಕೆ ಈ ನಿಟ್ಟಿನಲ್ಲಿ ನಿಧಾನಿಸುತ್ತಿದ್ದೇವೆ.–**‘ನೂಪುರ’ ಬಳಗ**)





ಅಭಿನಂದನೆಗಳು. ಕನ್ನಡ ಪತ್ರಿಕೋದ್ಯಮದಲ್ಲಿ ಒಳ್ಳೆಯ ಪ್ರಯತ್ನವೆಂಬುದು ನಮ್ಮ ಅನಿಸಿಕೆ. ನೃತ್ಯಕ್ಕೆ ಸಂಬಂಧಿಸಿದಂತೆ ನಮ್ಮನ್ನು ತಲುಪುತ್ತಿರುವ ಪತ್ರಿಕೆಗಳನ್ನು ಕಂಡಿರುವುದೇ ಕಡಿಮೆ. ನಿಮ್ಮ ಪ್ರಯತ್ನ ನಿಜಕ್ಕೂ ಪ್ರಶಂಸನೀಯ. ‘ಗೆಜ್ಜೆಗಳ ಲೋಕದಲ್ಲೊಂದು ಸುತ್ತುವಿಕೆ’ಗೆ ಯಾವತ್ತಿಗೂ ಯಶಸ್ಸು ಸಿಗಲಿ.


***–ವೀಣಾ ಶ್ರೀಪಾದ್ ಮತ್ತು ಕಾವ್ಯಶ್ರೀ, ಬೆಂಗಳೂರು.***

ಅತ್ಯುತ್ತಮ ಪ್ರಯತ್ನ. ಹೆಚ್ಚು ಜನರಿಗೆ ಇದರ ಪ್ರಯೋಜನವಾಗುತ್ತದೆ. ಆದ್ದರಿಂದ ಹೆಚ್ಚಿನ ಪ್ರಸಾರ ಆಗಲಿ.

***–ಗುರುರಾವ್ ಕುಲಕರ್ಣಿ, ಬೆಂಗಳೂರು.***

...ಹಿರಿಯ ಕವಿಯೊಬ್ಬರು ಹೇಳಿದ ಮಾತು ನೆನಪಾಯಿತು. ‘ಬೆಟ್ಟ ಇರುವುದು ಎಲ್ಲರೂ ಹತ್ತಲಿ ಎಂದಲ್ಲ. ಕೆಲವರಾದರೂ ಹತ್ತಲಿ ಎಂದು...’ ಅದೇ ರೀತಿ ನೂಪುರ ಭ್ರಮರಿ ಎಂಬ ದ್ವೈಮಾಸಿಕ ಸಂಚಿಕೆ ಕೂಡಾ! ಬೆಟ್ಟವನ್ನು ದೂರದಿಂದಲೇ ನೋಡಿ ಸಂತೋಷಿಸುವವರು ಕೆಲವರು. ಏಕೆಂದರೆ ಅವರಿಗೆ ಹತ್ತಲು ತಾಳ್ಮೆ ಮತ್ತು ಶಕ್ತಿಯ ಕೊರತೆ. ಇನ್ನು ಕೆಲವರಿಗೆ ಬೆಟ್ಟವೇ ತಮ್ಮ ಬಳಿ ಬರಲಿ ಎಂಬ ಉದಾಸೀನ. ಮತ್ತೆ ಕೆಲವರಿಗೆ ತಮ್ಮ ಸೌಂದರ್ಯದ ಎದುರು ಬೆಟ್ಟ ಯಾವ ಮಹಾ ಎಂಬ ತಾತ್ಸಾರ. ಕೆಲವರಷ್ಟೇ ಪ್ರಯತ್ನಪೂರ್ವಕವಾಗಿ ಕಾಯಾ-ವಾಚಾ-ಮನಸಾ ಬೆಟ್ಟದ ಸೌಂದರ್ಯವನ್ನು ಸವಿಯುತ್ತಾ, ಅದನ್ನು ಇತರರೊಂದಿಗೆ ಹಂಚಿಕೊಳ್ಳುವ ಮನೋಭಾವ ಹೊಂದಿರುತ್ತಾರೆ. ಅದರಲ್ಲಿ ನೀವೂ ಕೂಡಾ ಒಬ್ಬರು ಎಂಬುದು ಖುಷಿ ಕೊಟ್ಟ ವಿಚಾರ. ಇದು ಕೇವಲ ಹೊಗಳಿಕೆಗಾಗಿ ಬರೆದ ಮಾತಲ್ಲ.

ಕಲೆ ಎಲ್ಲರಿಗೂ ಕೈಗೆಟುಕುವ ವಸ್ತುವಲ್ಲ. ಕೈಗೆಟುಕಿದವರೆಲ್ಲರಿಗೂ ಅದು ಒಲಿದು ಬರುವುದೂ ಅಪರೂಪ. ಅದರಲ್ಲೂ ಅದರ ಹೃದ್ಯ ಆನಂದವನ್ನು ಹಂಚಿಕೊಂಡು ಅನುಭವಿಸಲು ಸಹೃದಯರ ಕೊರತೆ ! ಹೀಗಿರುವಲ್ಲಿ ನೂಪುರ ಭ್ರಮರಿ ಕಲಾ ರಸಿಕರೆಡೆಗೆ ನಾಟ್ಯ ಮಯೂರಿಯಾಗಿ ತನ್ನ ಗರಿಗಳೆಡೆಯಿಂದ ಲವಲವಿಕೆ ಸೂಸುತ್ತಿರುವುದು ಮನಸ್ಸಿಗೆ ಮುದ ಕೊಡುತ್ತಿದೆ. ನಿಮ್ಮ ಶ್ರಮ ಸಾರ್ಥಕವಾಗಲಿ.




ಒಂದಿಷ್ಟು ಸಲಹೆ :

೧. ನೃತ್ಯ ಮತ್ತು ಸಂಗೀತ ಒಂದಿಲ್ಲದೆ ಇನ್ನೊಂದಿಲ್ಲ. ಹಾಗಾಗಿ ಭ್ರಮರಿಯಲ್ಲಿ

ಈ ಎರಡಕ್ಕೂ ಸಮಾನ ಒತ್ತು ಕೊಡುವುದು ಉಚಿತ.

೨. ಲೇಖನಗಳು ಈಗಷ್ಟೇ ಕ್ಷೇತ್ರಕ್ಕೆ ಕಾಲಿರಿಸುವವರಿಗೆ ಪೂರಕ ಮಾಹಿತಿ ಒದಗಿಸುವಂತಾಗಲಿ. ಪಂಡಿತ ಪಾಮರ ಇಬ್ಬರಿಗೂ ವೇದಿಕೆಯಾಗಲಿ.

೩. ಸಂಗೀತ, ನೃತ್ಯ ಸಂಬಂಧಿ ಪುಸ್ತಕಗಳಿಂದಾಯ್ದು ಲೇಖನಗಳನ್ನು ಸಮಯೋಚಿತವಾಗಿ ಸಂಚಿಕೆಯಲ್ಲಿ ಬಳಸಿಕೊಳ್ಳಬಹುದು.

**–ನಾಗೇಶ್ ಕಾಲೂರು, ಕಾಲೂರು, ಕೊಡಗು.**

(ನಿಮ್ಮ ಸಲಹೆ ಸೂಕ್ತವಾಗಿದೆ. ಈ ನಿಟ್ಟಿನಲ್ಲಿ ನಮ್ಮ ಪ್ರಯತ್ನ ಸದಾ ಇರುತ್ತದೆ. ಸಮಯೋಚಿತವಾಗಿ ಬಳಸಿಕೊಳ್ಳುತ್ತೇವೆ– **'ನೂಪುರ' ಬಳಗ**)

✵

***ಧರ್ಮಸ್ಥಳದ ಧರ್ಮಾಧಿಕಾರಿಗಳಾದ ಡಾ। ಡಿ. ವೀರೇಂದ್ರ ಹೆಗ್ಗಡೆ, ಮಂಗಳೂರು ಚಂದ್ರದೀಪ ನೃತ್ಯಕಲಾಶಾಲೆಯ ಪ್ರಾಂಶುಪಾಲೆ ವಿದುಷಿ ವೀಣಾ ಕಾರಂತ್, ಮಂಗಳೂರು ಕನ್ನಡ ಅಧ್ಯಯನ ವಿಭಾಗದ ಪ್ರವಾಚಕಿ ಡಾ। ಸಬೀಹಾ ಭೂಮಿಗೌಡ, ಉಡುಪಿಯ ವಿಮರ್ಶಕ ವಿದ್ವಾಂಸರಾದ ಉದ್ಯಾವರ ಮಾಧವ ಆಚಾರ್ಯ, ಮತ್ತಿತರರು ಹರಸಿದ್ದಾರೆ, ಹಾರೈಸಿದ್ದಾರೆ, ಅಭಿನಂದಿಸಿದ್ದಾರೆ...***

✵✵ ✵✵ ✵✵

## ।ಅಂಗಳದ ಮಾತು ।ತಿಂಗಳ ಚರ್ಚೆ

ವಿಶೇಷಾಂಕ ಚೆನ್ನಾಗಿ ಬಂದಿದೆ. ಚರ್ಚೆಗಳು, ವಿಚಾರ, ಲೇಖನಗಳ ಗುಣಮಟ್ಟ ಒಳ್ಳೆಯದಿದೆ. ನಿಮ್ಮ ಸಾಹಸಕ್ಕೆ ಅಭಿನಂದನೆಗಳು ಮತ್ತು ಶುಭಾಕಾಂಕ್ಷೆಗಳು.

ಡಾ। ಆರ್. ಗಣೇಶರ ಚಿಂತನೆಗಳು ಉತ್ತಮವಾಗಿದೆ. ಪರಂಪರೆ ಮತ್ತು ಪ್ರಯೋಗ– ಇವೆರಡೂ ಕೆಲವೊಮ್ಮೆ 'ಅನುಕೂಲಶಾಸ್ತ್ರ'ಗಳಾಗಿಬಿಡುವುದು ನಿಜ. ನೃತ್ಯಶಿಕ್ಷಕರಿಗೆ (ಹೆಚ್ಚಿನವರಿಗೆ) ನೃತ್ಯದ/ಒಟ್ಟಾರೆ ಕಲೆಗಳ ಕುರಿತ ತಾತ್ವಿಕ ಜ್ಞಾನ ಕಡಿಮೆ. ಹೀಗಿರುವಾಗ ಭರತನಾಟ್ಯ ಕಲಿಕೆಯೂ 'ಜಾನಪದ'ದಂತೆಯೇ ಆಗಿದೆ. Institution ಪದ್ಧತಿಯೇ ಇದಕ್ಕೆ ಪರಿಹಾರ.

***–ಡಾ। ಎಂ. ಪ್ರಭಾಕರ ಜೋಷಿ, ಮಂಗಳೂರು.***







# ಪರಂಪರೆ ಮತ್ತು ಕಲಾತ್ಮಕ ಮೌಲ್ಯಗಳ ಸಂಕಲನ : ಶ್ರೀರಾಮಸೇತು

'ಮನೂ' ಬನ

**ಪೌರಾಣಿಕ ಪ್ರಸಂಗಗಳಿಗೆ ಜೀವ ಕೊಡುವುದರೊಂದಿಗೆ ಸಮಕಾಲೀನ ನಿಲುವುಗಳಿಗೆ ಒತ್ತುಕೊಡುತ್ತಾ ಪ್ರಯೋಗಗಳಿಗೆ ಹರಿಕಾರನಾಗುತ್ತಾ, ಜಾನಪದ ಮತ್ತು ಶಾಸ್ತ್ರೀಯ ನೃತ್ಯ ಪರಂಪರೆಯನ್ನು ಏಕಕಾಲಕ್ಕೇ ನಮ್ಮೆದುರು ತಂದಿರಿಸುವ ನಮ್ಮ ನಾಡಿನದ್ದೇ ಆದ ಕಲೆ ಎಂಬುದಿದ್ದರೆ ಅದು ಯಕ್ಷಗಾನವೇ ಸೈ ! ಇಂತಹ ಅಪೂರ್ವ ಕಲೆಯ ಕುರಿತ ವಿಮರ್ಶಾತ್ಮಕ, ಚಿಂತನಪೂರ್ಣ ಬರಹಗಳಿದ್ದರೆ ಕಳಿಸಿ. ಸದಾ ಸ್ವಾಗತ.**

ಕಲಾಭಿವ್ಯಕ್ತಿಗಾಗಿ ಯಕ್ಷಗಾನ ಕೂಟಗಳು, ಮೇಳಗಳು ಇತ್ತೀಚೆಗೆ ಹಲವು ತೆರೆಮರೆಗೆ ಸರಿದ, ಅಷ್ಟಾಗಿ ರಂಗಕ್ಕೇರದ ಪ್ರಸಂಗಗಳಿಗೆ ಜೀವ ತುಂಬಿ ಕಲಾತ್ಮಕವಾಗಿ ಮಾತ್ರವಲ್ಲದೆ, ಯಕ್ಷಗಾನೀಯವಾಗಿಯೂ ತೆರೆದುಕೊಳ್ಳುವಂತೆ ಮಾಡುತ್ತಿದೆ. ಈ ಸಾಲಿಗೆ ಉದಾಹರಣೆಯಾಗಿ ಕಂಡಿದ್ದು ಶ್ರೀರಾಮಚಂದ್ರಾಪುರ ಮಠದ ಯಕ್ಷಗಾನ ಮೇಳದ ಈ ಬಾರಿಯ ತಿರುಗಾಟದ ಮುಖ್ಯ ಪ್ರಸಂಗ 'ಶ್ರೀರಾಮಸೇತು'. ಕಳೆದ ಬಾರಿಯ ತಿರುಗಾಟದ ಮುಖ್ಯ ಪ್ರಸಂಗಗಳೆನಿಸಿದ ಪುಣ್ಯಕೋಟಿ, ಕನ್ಯಾಂತರಂಗದ ಸಾಲಿಗೆ ಸೇರುವ; ಸೃಜನಶೀಲ ಸ್ಪರ್ಶ, ನಿರೂಪಣೆಯ,ರಂಗಕ್ಕೆ ಹೊಸ ಮೆರುಗು, ಜೀವಂತಿಕೆಯನ್ನು ತಂದಿಡುವ ಪ್ರಸಂಗವಿದು.

ವಾಲ್ಮೀಕಿ ರಾಮಾಯಣದ ಕಥಾ ಹಂದರಕ್ಕಿಂತ ಸಾಕಷ್ಟು ತನ್ನ ನಡೆಯಲ್ಲಿ ಬದಲಾವಣೆ ಮಾಡಿಕೊಂಡಿದ್ದರೂ 'ಶ್ರೀರಾಮಸೇತು' ಪರಂಪರೆಯನ್ನು ಪ್ರತಿನಿಧಿಸುವಲ್ಲಿ ಸೋತಿಲ್ಲವೆನಿಸಿದ್ದು ಹೌದು. ಸಾಮಾನ್ಯವಾಗಿ ಯಾವುದೇ ಕಥೆಯನ್ನಾದರೂ ರಂಗಕ್ಕೆ ಅಳವಡಿಸುವಲ್ಲಿ ಪೌರಾಣಿಕ ಹಿನ್ನಲೆಗೇ ಪ್ರಾತಿನಿಧ್ಯ ಹೆಚ್ಚು. ಆದರೂ ಪೂರಕವಾಗಿ ನಾಟಕಧರ್ಮಕ್ಕೂ ಪ್ರಾಮುಖ್ಯತೆ ಕೊಡಬೇಕಾಗುತ್ತದೆ. ಇದರಿಂದ ಕಲಾಪ್ರಕಾರವು ಪರಂಪರೆಯನ್ನು ಸಮರ್ಥ ಅಭಿವ್ಯಕ್ತಿಸುವುದರೊಂದಿಗೆ, ಸಕಾಲಿಕ ಎಂದೆನಿಸಿಕೊಳ್ಳುತ್ತದೆ. ಅಷ್ಟಕ್ಕೂ ಯಕ್ಷಗಾನ ಪ್ರಸಂಗಗಳಿಗೆ ತೊರವೆ ರಾಮಾಯನದ ಆಧಾರ, ಪ್ರಭಾವ ಸಾಕಷ್ಟಿದೆ ಎನ್ನುವುದು ಸರ್ವ ವಿದಿತ. ಜೊತೆಗೆ ಬದಲಾಗುತ್ತಿರುವ ಕಾಲಘಟ್ಟಕ್ಕೆ ಸ್ಪಂದಿಸಲು, ವಿಷಯಗಳ ನಿರೂಪಣೆಯಲ್ಲಿ ಸಾಂದರ್ಭಿಕವಾಗಿ ಸಣ್ಣಪುಟ್ಟ ವ್ಯತ್ಯಾಸಗಳು ವಿಹಿತ. ಹಾಗಾಗಿ ಕಥೆಯ ಆಶಯ ಕಲಾತ್ಮಕ ಮಾತ್ರವಲ್ಲ ಯಕ್ಷಗಾನೀಯವೂ ಕೂಡಾ!

ಪ್ರಸಂಗದ ಹೆಸರು ಪ್ರಸ್ತುತ ದಿನಗಳಲ್ಲಿ ಕಾವೇರುತ್ತಿರುವ ಶ್ರೀರಾಮಸೇತು ಪ್ರಕರಣಕ್ಕೆ ಪೂರಕವೋ ಎಂಬಂತೆ ಮೂಡಿಬಂದರೆ ಅದು ಪ್ರಸಂಗದ ತಪ್ಪಲ್ಲ. ಹೆಸರು ಕೇಳಿದ ಮಾತ್ರಕ್ಕೆ ಮೇಲ್ನೋಟಕ್ಕೆ ಎದ್ದಿರುವ ರಾಜಕೀಯ ವಿವಾದಗಳಿಗೆ ತಮ್ಮ ನಿಲುವನ್ನು ಪ್ರತಿಷ್ಠಾಪಿಸಲು ಯಕ್ಷಗಾನ ಪ್ರಕಾರಕ್ಕೆ ಅಂಟಿಕೊಂಡಿದ್ದಾರೆಯೋ ಎಂಬ ಅನುಮಾನ

ವ್ಯಕ್ತವಾದರೂ, ಪ್ರಸಂಗವನ್ನು ವೀಕ್ಷಿಸಿದ ಮೇಲೆ ಈ ಗ್ರಹಿಕೆ ಸುಳ್ಳೆನಿಸುತ್ತದೆ.

ಪಾರ್ತಿಸುಬ್ಬರ ಯಕ್ಷಗಾನೀಯ ನಿಲುವಿಗೆ ಬದ್ಧವಾಗಿ, ಪುತ್ತಿಗೆ ರಾಮಕೃಷ್ಣ ಜೋಯಿಸರ 'ಶ್ರೀರಾಮ ಪಟ್ಟಾಭಿಷೇಕ'ವನ್ನು ಮುಖ್ಯ ಆಕರವಾಗಿಸಿಕೊಂಡಿದೆ 'ಶ್ರೀರಾಮಸೇತು'. ಪ್ರಸಂಗ ಪ್ರಾಂಭಗೊಳ್ಳುವುದು ಸೇತುನಿರ್ಮಾಣದ ಕಥೆಯಿಂದ. ಅಲ್ಲಿಂದ ಮುಂದುವರೆಯುವ ಕಥಾಭಾಗ ವರುಣ ಪ್ರಾರ್ಥನೆ– ಮಕರ ನಿಗ್ರಹ– ಅಂಗದ ಸಾಹಸ–ಶನಿ ಗರ್ವಭಂಗ–ಅಳಿಲುಸೇವೆ–ರಾವಣನ ಆಸ್ಥಾನ–ಸೇತುವಿಗೆ ಶುಕ ಸಾರಣರ ಭೇಟಿ ಮತ್ತು ವರ್ಣನೆ–ಛತ್ರಭಂಗ–ಇಂದ್ರಜಿತುವಿನ ನಾಗಾಸ್ತ್ರ ಪ್ರಕರಣ–ರಾವಣವಧೆ–ಸೀತೆ ಅಗ್ನಿಪರೀಕ್ಷೆ–ರಾವಣ ಪ್ರೇತಮೋಕ್ಷ–ಸೇತುಖಂಡನ–ರಾಮೇಶ್ವರ ಕ್ಷೇತ್ರ ನಿರ್ಮಾಣದಲ್ಲಿ ವಿಸ್ತರಿಸಿಕೊಂಡು ಬಂದು ಮಂಗಳವಾಗುತ್ತದೆ. ಇವೆಲ್ಲದರ ನಡುವೆ ಶಿವ ಪಾರ್ವತಿಯರ ಸಂವಾದ, ಅಂಗದನಿಗೆ ಬುದ್ಧಿವಾದ, ಅಂತ್ಯದಲ್ಲಿ ಹನುಮಂತನು ಪ್ರೇತಮೋಕ್ಷಕ್ಕಾಗಿ ಕೈಲಾಸಕ್ಕೆ ಶಿವಲಿಂಗವನ್ನು ತರಲು ಹೋಗುವಲ್ಲಿಗೆ ಹರಿಹರರ ನಡುವಿನ ಐಕ್ಯತೆ, ಅವರ್ಣನೀಯ ಸಂಬಂಧವನ್ನು ಪ್ರಕಟಗೊಳಿಸುತ್ತದೆ. ಅಳಿಲೊಂದು ಸೇತುನಿರ್ಮಾಣದಲ್ಲಿ ಪಾಲ್ಗೊಳ್ಳುವ ಮತ್ತು ಹನುಮದೀಶ್ವರ ಲಿಂಗಸ್ಥಾಪನೆಯು ಭಕ್ತ ಮತ್ತು ಭಗವಂತನ ಅವಿನಾಭಾವ ಸಂಬಂಧವನ್ನು ಸ್ಪಷ್ಟವಾಗಿ ಮತ್ತು ಅಷ್ಟೇ ಪರಿಣಾಮಕಾರಿಯಾಗಿ ಅಭಿವ್ಯಕ್ತಿಸುತ್ತದೆ. ಜಾನಪದೀಯ ನೆಲೆಯ ಅಳಿಲು ಸೇವೆಯ ಪಾತ್ರಕ್ಕೆ ಪೌರಾಣಿಕ ಸ್ಪರ್ಶ ನೀಡಿ, ವಿನೂತನವೆನಿಸುವ ಪ್ರೇತಮೋಕ್ಷ ಕಥಾಹಂದರವನ್ನು ಸಮಯೋಚಿತವಾಗಿ ಅಳವಡಿಸಿಕೊಂಡು ಕಲಾತ್ಮಕ ಸ್ಪರ್ಶವನ್ನಿತ್ತಿರುವುದು ಪ್ರಸಂಗದ ಹೈಲೈಟ್ !

ಸಾಮಾನ್ಯವಾಗಿ ರಾಮಾಯಣಾಧಾರಿತ ಯಕ್ಷಗಾನ ಪ್ರಸಂಗಗಳ ಪೈಕಿ ವಾಲಿ ಮೋಕ್ಷ, ರಾವಣ ಸಂಹಾರ, ಇಂದ್ರಜಿತು ವಧೆ, ಅಹಿರಾವಣ–ಮೈರಾವಣ ವಧೆ ಮುಂತಾದವುಗಳು ಮುಖ್ಯ ಪಟ್ಟಿಯಲ್ಲಿದ್ದು, ರಾಮಸೇತು ನಿರ್ಮಾಣ, ಅಗ್ನಿಪರೀಕ್ಷೆ, ಮಕರನಿಗ್ರಹ, ಅಳಿಲುಸೇವೆಯಂತಹ ಕಥಾಸಂಯೋಜನೆ ಅಷ್ಟಾಗಿ ರಂಗಕ್ಕೆ ಏರಿದ ಉದಾಹರಣೆಗಳಿಲ್ಲ. ಪ್ರಸಂಗದ ಶುಕ ಸಾರಣ ಮತ್ತು ಶಿವನ ಪಾತ್ರದ ಆಂಗಿಕಾಭಿನಯ(ನೃತ್ಯ, ಹಾವಭಾವ)ದಲ್ಲಿ ಬಡಗುತಿಟ್ಟಿನ ಸ್ಪರ್ಶವಿದೆಯೇನೋ ಎಂದು ನೋಡುಗರಿಗೆ ಅನಿಸುವುದು ಸಹಜ. ಆದರೂ ತೆಂಕುತಿಟ್ಟಿನಲ್ಲೂ ಅಂತಹ ನೃತ್ಯವಿಸ್ತಾರಗಳಿರುವುದು ವೇದ್ಯ. ನರ್ತನ ಪ್ರಕಾರಗಳಲ್ಲಿ ಶೃಂಗಾರ ಆದ್ಯತೆಯ ಮತ್ತು ಜನಾಕರ್ಷಣೀಯ ಭಾವ ಎನ್ನುವುದನ್ನು ಗಮನದಲ್ಲಿರಿಸಿ ನೋಡಿದರೆ, ಈ ನವರಸಭರಿತ ಪ್ರಸಂಗ ನಿರೂಪಣೆಯಲ್ಲಿ ಶೃಂಗಾರದ ಕೊರತೆ ಸಹಜವಾಗಿಯೇ ಎದ್ದು ಕಾಣುತ್ತದೆ. ಇನ್ನುಳಿದಂತೆ ಸಿದ್ಧಕಟ್ಟೆ ವಿಶ್ವನಾಥಶೆಟ್ಟಿಯವರ ಸೃಜನಶೀಲ ಪದ್ಯಗಳು, ಕಥಾಸಂಯೋಜನೆ, ಪ್ರಸಂಗದ ವಿಸ್ತರಣಾ





ಪ್ರಕ್ರಿಯೆ, ಸಮಯ ಪಾಲನೆ, ವಾಚಿಕಾಭಿನಯ, ಆಹಾರ್ಯಾಭಿನಯ, ಮೇಳದ ವ್ಯವಸ್ಥಾಪಕರ, ಹಿಮ್ಮೇಳ ಮತ್ತು ಮುಮ್ಮೇಳದ ಕಲಾವಿದರ ಅಚ್ಚುಕಟ್ಟುತನ ಮತ್ತು ರಂಗನಿರ್ವಹಣೆ–ಎಲ್ಲವೂ ಪ್ರಬುದ್ಧವಾಗಿದ್ದು, ಪರಂಪರೆ ಮತ್ತು ಹೊಸತಿನ ಅಂದವನ್ನು ಪ್ರತಿನಿಧಿಸುತ್ತದೆ.

ಪ್ರಸ್ತುತ ದಿನಗಳಲ್ಲಿ ಯಕ್ಷಗಾನ ಕಲಾ ಉದ್ಯಮವು ಇಡೀ ರಾತ್ರಿಯ ಪ್ರಸಂಗಗಳಿಂದ ಕಳಚಿಕೊಳ್ಳುತ್ತಾ, ವರ್ತಮಾನಕ್ಕೆ ತಕ್ಕಂತೆ ಕಾಲಮಿತಿಯ ಬದ್ಧತೆಗೆ, ನಿರ್ದಿಷ್ಟ ಚೌಕಟ್ಟಿಗೆ ಒಳಪಡುತ್ತಿದೆ. ಇಂತಹ ಸ್ಥಿತ್ಯಂತರದಲ್ಲಿ ಪ್ರೇಕ್ಷಕ ಸಹೃದಯರ ರಸಿಕತನವನ್ನು ಹೆಚ್ಚು ಮಾಡುವಲ್ಲಿ ಶ್ರೀರಾಮಸೇತುವಿನಂತಹ ಪ್ರಸಂಗದ ನಿರ್ವಹಣೆ, ನಿರೂಪಣೆ ಹೊಸ ಸಾಧ್ಯತೆಗಳನ್ನು ಸಾಧಿಸುವುದು ಒಳ್ಳೆಯ ಸಂಗತಿ.

---

*ಏನು ಅಂದ ಬಿಸವಂದವೊ ನಿನ್ನ ಮಧುರ ಮೈತ್ರಿಯು !*
*ನೃತ್ಯ ಹಾಡು, ಸೊಗದ ಕೋಡು– ಧನ್ಯಳೀ ಧರಿತ್ರಿಯು :*
*ಹೇಮಂತನ ತ್ಯಾಗವೂ*
*ಈ ವಸಂತಭೋಗವೂ*
*ಬದುಕಿಗೆಂದೆ ಬಿಜಯಗೈಯೆ ಪ್ರೀತಿ ಸಮಾಯೋಗವು*
*–ಹಾಗು ಹೀಗು ಹೇಗೆಯು.*
*ಬನದ ಬಯಕೆ ಮಾಗಿದೆ*
*ಚೈತ್ರೋದಯವಾಗಿದೆ*
*ಬಾ ವಸಂತ ನಿನಗನಂತ ಆಲಿಂಗನ ಸಂದಿದೆ*
*–ಸೃಷ್ಟಿ ನೋಂತು ನಿಂದಿದೆ !*

**– ಚೆನ್ನವೀರ ಕಣವಿ, 'ಸೃಷ್ಟಿ ನೋಂತು ನಿಂತಿದೆ'**



